# ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 ಸಂಚಿಕೆ 21 ಆಗಸ್ಟ 5, 1979 40 ಪೈಸೆ

## ಕೇರಳದ ವಿದ್ಯಮಾನ

ಕೇಂದ್ರದಲ್ಲಿನ ಬದಲಾವಣೆ ಮತ್ತು ಅನಿಶ್ಚಿತತೆ, ಕೇಂದ್ರದಲ್ಲಿನ ಬದಲಾವಣೆಯ ಪರಿಣಾಮ ಬೇರೆ ಬೇರೆ ರಾಜ್ಯಗಳಲ್ಲಿ ಉಂಟಾಗಿರುವ ಅನಿಶ್ಚಿತತೆಗಳ ಹಿನ್ನೆಲೆಯಲ್ಲಿ ಕೇರಳ ರಾಜ್ಯದಲ್ಲಿನ ರಾಜಕೀಯ ಬೆಳವಣಿಗೆಗಳ ಬಗ್ಗೆ ಹೆಚ್ಚಿನ ಗಮನ ಹರಿದಿಲ್ಲ. ಮಾರ್ಕ್ಸಿಸ್ಟ್ ವಿರೋಧಿ ರಂಗವಾಗಿ ಹುಟ್ಟಿಕೊಂಡು, ಅಧಿಕಾರಕ್ಕೆ ಬಂದ ಕೇರಳದ ಸಂಯುಕ್ತರಂಗ ಸರಕಾರವು ಬಲ ಕಮ್ಯುನಿಸ್ಟ್ ಮುಖಂಡ ಅಚ್ಯುತಮೆನನ್ ಅವರ ಮುಂದಾಳುತ್ವದಲ್ಲಿ ತುರ್ತು ಪರಿಸ್ಥಿತಿ ಸಮಯದಲ್ಲಿಯೂ ಆಡಳಿತ ನಡೆಸಿ, 1977ರ ಚುನಾವಣೆಯಲ್ಲಿ ಮತ್ತೆ ಹೆಚ್ಚಿನ ಬಹುಮತಗಳನ್ನು ಹೇಗೋ ಪಡೆದು ಅಧಿಕಾರ ನಡೆಸುತ್ತಾ ಬಂದಿದೆ. ಆದರೆ ಸಂದರ್ಭಸಾಧಕತನ ಮತ್ತು ಅಧಿಕಾರ ಲಾಲಸೆಯಿಂದ ಹುಟ್ಟಿ ಬೆಳೆದ ಈ ಕೂಟದ ಅಡಿಪಾಯವೇ ಇಂದು ಕುಸಿದು ಬೀಳುವ ಸ್ಥಿತಿಯಲ್ಲಿದೆ. 1977ರ ಚುನಾವಣೆ ಮತ್ತು ಇಂದು ಈ ಮಧ್ಯೆ ಅನೇಕ ಬೆಳವಣಿಗೆಗಳು ಕೇರಳದ ಸಂಯುಕ್ತ ಸರಕಾರ ದಿನಗಳೆಣಿಸುವಂತೆ ಮಾಡಿದೆ. ಸುಭದ್ರ ಸರಕಾರವನ್ನು ಕೊಡುವುದರಲ್ಲಿ ಯಶಸ್ವಿಯಾಗಿದೆಯೆಂದು ಬೂರ್ಜ್ವಾ ಪತ್ರಿಕೆಗಳಲ್ಲಿ ಹೊಗಳಿಸಿಕೊಳ್ಳುತ್ತಿದ್ದ ಸಂಯುಕ್ತ ಸರಕಾರದ ಸುಭದ್ರ

### ಸಂಪಾದಕೀಯ

ಆಡಳಿತದ ಹಿಂದೆ ಅಡಗಿದ್ದ ಪ್ರಜಾಪ್ರಭುತ್ವ ಹಕ್ಕುಗಳ ಕೊಲೆ, ತುರ್ತು ಪರಿಸ್ಥಿತಿಯಲ್ಲಿ ನಡೆದ ಘೋರಕೃತ್ಯಗಳೂ ಈಗ ಬೆಳಕಿಗೆ ಬಂದಿದೆ.

1977ರ ಚುನಾವಣೆಯ ನಂತರ ಕಾಂಗ್ರೆಸ್ ಎರಡಾಗಿದ್ದುದರಿಂದ ಪ್ರಾರಂಭಗೊಂಡು. ಸದ್ಯ ಕೇರಳ ಕಾಂಗ್ರೆಸ್ಸಿನ ಕೆ. ಎಮ್. ಮಣಿ ತಂಡದ ಹದಿನಾಲ್ಕು ಜನ ಶಾಸಕರೂ ಮತ್ತು ಸಂಯುಕ್ತ ಸರಕಾರದ ಕಡೆಯಿರುವ ಕಾಂಗ್ರೆಸ್ಸಿನಿಂದ ಶಾಸಕರಾದ ಶ್ರೀ ಕೆ. ಶಂಕರನಾರಾಯಣನವರೂ ಸಂಯುಕ್ತ ಸರಕಾರಕ್ಕಿರುವ ಬೆಂಬಲವನ್ನು ಹಿಂತೆಗೆದುಕೊಂಡಿರುವುದರಿಂದ ಸರಕಾರದ ಬೆಂಬಲ ಬಹಳ ಕಡಿಮೆಯಾಗಿದೆ. ಒಂದು ಸ್ಥಾನ ಖಾಲಿ ಇರುವ 141 ಮಂದಿ ಸದಸ್ಯರ ವಿಧಾನಸಭೆಯಲ್ಲಿ ಸಂಯುಕ್ತರಂಗ ಸರಕಾರಕ್ಕೆ ಈಗಿರುವ ಬೆಂಬಲ ಒಟ್ಟು 73 ಸದಸ್ಯರದ್ದು ಮಾತ್ರ. ಸಂಯುಕ್ತರಂಗ ಸರಕಾರವು ಜನಬೆಂಬಲವನ್ನು ಹೆಚ್ಚುಹೆಚ್ಚಾಗಿ ಕಳೆದುಕೊಳ್ಳುತ್ತಿರುವುದು ಕಳೆದ ಉಪಚುನಾವಣೆಗಳಿಂದ ಸ್ಪಷ್ಟವಾಗಿದೆ. ಜನಬೆಂಬಲವಿಲ್ಲದಿರುವುದರಿಂದಲೇ ಹಲವು ವರ್ಷಗಳಿಂದ ನಡೆಯಬೇಕಾಗಿದ್ದ ಪಂಚಾಯಿತಿ ಚುನಾವಣೆಯನ್ನು ಸಂಯುಕ್ತ ಸರಕಾರ ಮುಂದೂಡುತ್ತಾ ಬಂದಿದೆ. ಇನ್ನೂ ನಡೆಸುವ ಲಕ್ಷಣಗಳಿಲ್ಲ. ಈ ಎಲ್ಲಾ ಪರಿಸ್ಥಿತಿಯಲ್ಲಿ "ಮುಳುಗುವ ದೋಣಿಯಲ್ಲಿರುವುದು ಬೇಡ"ವೆಂದು ಇನ್ನು ಕೆಲವು ಪಕ್ಷದವರು ಅಥವಾ ಶಾಸಕರುಗಳು ಸಂಯುಕ್ತರಂಗ ಸರಕಾರಕ್ಕಿರುವ ಬೆಂಬಲವನ್ನು ಹಿಂತೆಗೆದುಕೊಳ್ಳುವ ಸಾಧ್ಯತೆಗಳಿವೆ.

ಆದರೆ ಹೇಗಾದರೂಮಾಡಿ ಅಧಿಕಾರದಲ್ಲಿರಬೇಕೆಂದು ಸಂಯುಕ್ತ ಸರಕಾರದ ಮುಖಂಡರುಗಳ ಆಸೆ. ದೆಹಲಿಯಲ್ಲಿನ ಬದಲಾವಣೆ, ಕಾಂಗ್ರೆಸ್ಸು

[ಕಡೆಯ ಪುಟ ನೋಡಿ]

## ಹೊಸ ಸರಕಾರ ರಚನೆ ಬಗ್ಗೆ

## ಸಿ. ಪಿ. ಐ. (ಎಂ) ತೆಗೆದುಕೊಂಡ ನಿಲುಮೆ

ಕೆಲವು ಮುಖಂಡರುಗಳ ಸಂದರ್ಭಸಾಧಕತನ ಮತ್ತು ಬದಲಿ ಸರಕಾರ ಮಾಡುವುದಕ್ಕೆ ಆರೋಗ್ಯಕರವಾಗಿರುವ ಶಕ್ತಿಗಳನ್ನು ಒಂದುಗೂಡಿಸುವುದರಲ್ಲಿ ತೋರಿದ ಅಸಡ್ಡೆಯ ಪರಿಣಾಮವಾಗಿ, ಘಟನೆಗಳನ್ನು ರೂಪಿಸುವುದರಲ್ಲಿ ಭಾಗವಹಿಸಲು ಇಂದಿರಾ ಕಾಂಗ್ರೆಸ್ಸಿಗೆ ಸಾಧ್ಯವಾಗುವಂತಾಗಿದೆ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೊ 24-7-79 ರಂದು ಹೇಳಿದೆ. ಈ ಅಪಾಯದ ಬಗ್ಗೆ ಜುಲೈ 13 ರಂದೇ ಪೊಲಿಟ್ ಬ್ಯೂರೋವು ಎಚ್ಚರಿಸಿದೆ. ತನ್ನ ಉಳಿಯುವಿಕೆಗಾಗಿ ಆರ್. ಎಸ್. ಎಸ್. ಜನಸಂಘ ಕೂಟ ಅಥವಾ ಇಂದಿರಾ ಕಾಂಗ್ರೆಸ್ ಬೆಂಬಲವನ್ನು ಪಡೆಯದಿರುವ ಸರಕಾರ ರಚನೆಗೆ ಸಹಾಯ ಮಾಡಬೇಕೆಂದು ಪಕ್ಷದ ಕೇಂದ್ರಸಮಿತಿಯು ಪೊಲಿಟ್‌ಬ್ಯೂರೋವಿಗೆ ಆದೇಶ ನೀಡಿತ್ತು. ಜನತೆಯ ಹಿತಗಳನ್ನು ರಕ್ಷಿಸಿ, ಇಂದಿರಾಗಾಂಧಿಯ ಸರ್ವಾಧಿಕಾರ ಮತ್ತು ಜನಸಂಘ-ಆರ್. ಎಸ್. ಎಸ್. ಗಳ ಕೋಮು ಭಾವನೆಗಳ ವಿರುದ್ಧ ಹೋರಾಡುವ ಸರಕಾರವೊಂದೆ ಬದಲು ಸರಕಾರವಾಗಲು ಸಾಧ್ಯ ಎಂದೂ ಕೇಂದ್ರಸಮಿತಿಯು ಎಚ್ಚರಿಸಿತ್ತು.

ಕೇಂದ್ರಸಮಿತಿಯ ಆದೇಶದ ಪ್ರಕಾರ ಪೊಲಿಟ್‌ಬ್ಯೂರೋವು ಈ ದೃಷ್ಟಿಕೋಣದಿಂದಿರುವ ಬೇರೆಬೇರೆ ವ್ಯಕ್ತಿ, ಗುಂಪು ಮತ್ತು ಪಕ್ಷಗಳೊಂದಿಗೆ ಮಾತುಕತೆ ನಡೆಸಿತು. ರೈಲ್ವೆ ಕಾರ್ಮಿಕರಿಗೆ ಬೋನಸ್ಸ್ ನೀಡುವ ಸ್ಥಾನಬದ್ಧತಾ ಕಾಯ್ದೆಯನ್ನು ಜಾರಿಗೆ ತರದಿರುವ, ಮೊರಾರ್ಜಿ ಸರಕಾರ ಜಾರಿಮಾಡಿದ ಎರಡು ಸುಗ್ರೀವಾಜ್ಞೆಗಳನ್ನು ಹಿಂತೆಗೆಯುವ, ಬಂಧನಕ್ಕೊಳಗಾದ ಎಲ್ಲಾ ಪೋಲೀಸರನ್ನು ನಿಶ್ಯರ್ತವಾಗಿ ಬಿಡುಗಡೆಮಾಡಿ ಅವರ ಮೇಲೆ ಏನೂ ಕ್ರಮ ತೆಗೆದುಕೊಳ್ಳುವುದಿಲ್ಲ ಎಂಬ, ಹಾಗೆಯೇ ಬೆಲೆನಿಯಂತ್ರಣಗೊಳಿಸುವ, ಬಡರೈತರಿಗೆ ಅವರು ಉತ್ಪಾದಿಸಿದ ಬೆಳೆಗೆ ಯೋಗ್ಯ ಬೆಲೆ ಸಿಗುವಂತೆ ಮಾಡುವ-ಇವೇ ಮೊದಲಾದ ಕನಿಷ್ಟ ಕಾರ್ಯಕ್ರಮಗಳನ್ನು ರೂಪಿಸಲು ಹೊಸ ಸರಕಾರ ಮಾಡಲು ಮುಂದಾಗುವ ಪಕ್ಷಗಳು ಬದ್ಧವಾಗಿರಲು ಪಕ್ಷವು ಕರೆ ಕೊಟ್ಟಿತು.

ಆದರೆ "ಬೆಂಬಲಿಗರ ಸಂಖ್ಯೆಯ ಲೆಕ್ಕಾಚಾರ"ದ ಸಮಯವು ಸಮೀಪಿಸಿದಂತೆ, ಜನತಾ (ಎಸ್) ಇಂದಿರಾ ಕಾಂಗ್ರೆಸ್ಸಿನ ಬೆಂಬಲ ಪಡೆಯುವುದು ಸ್ಪಷ್ಟವಾಗಿದೆ. ಇಂದಿರಾ ಕಾಂಗ್ರೆಸ್ಸಿನ ಬೆಂಬಲವು ನಿಶ್ಯರ್ತವಾಗಿದೆಯೆಂದು ಹೇಳಿದರೂ, ರಚಿತವಾಗುವ ಜನತಾ (ಎಸ್) ಸರಕಾರವು ಇಂದಿರಾ ಕಾಂಗ್ರೆಸ್ಸಿನ ಮೇಲೆ ಹೆಚ್ಚಿಗೆ ಅವಲಂಬಿತವಾಗಿರಬೇಕೆಂಬುದು ನಿಶ್ಚಯ. ಇಂದಿರಾ ಕಾಂಗ್ರೆಸ್ಸಿನ ಅವಲಂಬನೆಯಿಂದ ಉಳಿಯುವ ಸರಕಾರಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಬೆಂಬಲವೀಯುವುದು ಸಾಧ್ಯವಿಲ್ಲ. ಹಾಗೆಯೇ ಜನಸಂಘ-ಆರ್. ಎಸ್. ಎಸ್. ಬೆಂಬಲದಿಂದ ರಚಿತವಾಗುವ ಸರಕಾರವನ್ನು ಪೊಲಿಟ್‌ಬ್ಯೂರೋವು ಸಂಪೂರ್ಣ ವಿರೋಧಿಸುತ್ತದೆ. ಈ ಎರಡು ಅಪಾಯಗಳ ವಿರುದ್ಧ ಒಂದಾಗಿ ಹೋರಾಡಲು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಗೆ ಪಕ್ಷವು ಕರೆಯೀಯುತ್ತದೆ.

●

### ತಿಪಟೂರಿನಲ್ಲಿ ಎಸ್. ಎಫ್. ಐ. ಮುಖಂಡರ ಮೇಲೆ ಹಲ್ಲೆ

## ವಿದ್ಯಾರ್ಥಿ ಪರಿಷತ್ತಿನವರಿಂದ ಗೂಂಡಾಗಿರಿ

ತುಮಕೂರು ಜಿಲ್ಲೆಯ ತಿಪಟೂರಿನ ಕಲ್ಪತರು ಕಾಲೇಜು ಖಾಸಗಿ ಸಂಸ್ಥೆಯೊಂದರ ಕಪಿಮುಷ್ಟಿಯಲ್ಲಿದೆ. ರಾಜ್ಯದ ಇತರೆ ಖಾಸಗಿ ಕಾಲೇಜುಗಳಂತೆ ಈ ಕಾಲೇಜಿನಲ್ಲೂ ವಿದ್ಯಾರ್ಥಿಗಳ ಮೇಲೆ ಆರ್ಥಿಕ ಶೋಷಣೆ ನಡೆಯುತ್ತಾ ಬಂದಿದೆ. ಪ್ರಗತಿಶೀಲ ವಿಚಾರ ಧಾರೆಗಳನ್ನು ಪ್ರತಿಪಾದಿಸುವ ಮತ್ತು ಶೋಷಣೆಯ ವಿರುದ್ಧ ಹೋರಾಡುವ ಭಾರತ ವಿದ್ಯಾರ್ಥಿ ಫೆಡರೇಶನ್(ಎಸ್. ಎಫ್.ಐ.) ನಂತಹ ಸಂಘಟನೆಯನ್ನು ಹತ್ತಿಕ್ಕಲು ಸತತವಾಗಿ ಶ್ರಮಿಸಿರುವ ಆಡಳಿತ ವರ್ಗವು ಅಂಧಶ್ರದ್ಧೆ, ಹಳೆಯ ಮೌಲ್ಯ ಮತ್ತು ಜಾತೀಯತೆಯನ್ನು ಪ್ರತಿಪಾದಿಸುವ ಶಕ್ತಿಗಳಿಗೆ ಉತ್ತೇಜನ ವೀಯುತ್ತಾ ಬಂದಿದೆ. ಆರ್. ಎಸ್. ಎಸ್. ಆಧಾರಿತ ವಿದ್ಯಾರ್ಥಿ ಪರಿಷತ್ತಿನಂತಹ ಸಂಘಟನೆಗೆ ಕಾಲೇಜಿನ ಪ್ರಾಂಶುಪಾಲರಂತಹವರಿಂದಲೇ ಉತ್ತೇಜನ ದೊರೆಯುತ್ತಿರುವುದು ಎಲ್ಲರಿಗೂ ತಿಳಿದ ವಿಚಾರ.

ಅನೇಕ ಎಡರು-ತೊಡರುಗಳನ್ನೆದುರಿಸಿದ ಭಾರತ ವಿದ್ಯಾರ್ಥಿ ಫೆಡರೇಶನ್ ತಿಪಟೂರಿನಲ್ಲಿ ವಿದ್ಯಾರ್ಥಿಗಳನ್ನು ಸಂಘಟಿಸಿ 1977-78ನೇ ಇಸವಿಯಲ್ಲಿ ನಡೆಸಿದ ದೀರ್ಘ ಹೋರಾಟದ ಪರಿಣಾಮವಾಗಿ ವಿದ್ಯಾರ್ಥಿಗಳಿಗೆ ಕೆಲವೊಂದು ಅನುಕೂಲತೆಗಳು ದೊರಕುವಂತಾಯಿತು. ಉಪಹಾರ ಗೃಹ, ಉತ್ತಮ ಶೌಚಗೃಹ ವ್ಯವಸ್ಥೆ ಇವೇ ಮೊದಲಾದುವುಗಳು ದೊರೆಯುವಂತಾಯಿತು. ಡೊನೇಷನ್ ಫೀಸು ರದ್ದುಮಾಡುವುದೂ ಸೇರಿದಂತೆ ಕೆಲವು ಬೇಡಿಕೆಗಳನ್ನು ಪ್ರಿನ್ಸಿಪಾಲರು ಮತ್ತು ಆಡಳಿತ ವರ್ಗ ಒಪ್ಪಿಕೊಂಡರೂ, ಆ ಮೇಲೆ ಇವರು ವಚನಭ್ರಷ್ಟರಾದರು. ವಿದ್ಯಾರ್ಥಿಗಳ ನ್ಯಾಯವಾದ ಬೇಡಿಕೆಗಳನ್ನು ಈಡೇರಿಸುವುದರ ಬದಲು ಎಸ್.ಎಫ್.ಐ.ಯನ್ನು ಹತ್ತಿಕ್ಕಲು ಆಡಳಿತ ವರ್ಗವು ಮುಂದಾಯಿತು. ಆಡಳಿತ ವರ್ಗದ ಕೈಗೊಂಬೆ ಪ್ರಿನ್ಸಿಪಾಲರು ಇದಕ್ಕೆ ಮುಂದಾದರು.

ಕಾಲೇಜು ವಿದ್ಯಾರ್ಥಿ ಸಂಘಕ್ಕೆ ಪ್ರಚಂಡ ಬೆಂಬಲದಿಂದ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದ (ಈಗ ಎಸ್. ಎಫ್. ಐ. ರಾಜ್ಯಸಮಿತಿಯ ಪ್ರಧಾನ ಕಾರ್ಯದರ್ಶಿಯವರಾಗಿರುವ) ಕಾಂ. ಶಾಂತರೇಣುಕಾರಾಧ್ಯ ಇವರನ್ನು ಯಾವುದೇ ಕಾರಣಗಳಿಲ್ಲದೆ ಕಾಲೇಜಿನಿಂದ ವಜಾ ಮಾಡಲಾಯಿತು. ಈ ಅಕ್ರಮ ವಜಾದ ವಿರುದ್ಧ ಹೈಕೋರ್ಟಿಗೆ ರಿಟ್ ಹಾಕಿದಾಗ, ಕೊನೆಗೆ ಪ್ರಿನ್ಸಿಪಾಲರು ತಾವು ಮಾಡಿದ ವಜಾ ಆಜ್ಞೆಯನ್ನು ಹಿಂತೆಗೆದುಕೊಂಡರು. ಹೈಕೋರ್ಟಿನಲ್ಲಿ ಶಾಂತರೇಣುಕಾರಾಧ್ಯ ಅವರಿಗೆ ಜಯವಾದರೂ, ಪ್ರಿನ್ಸಿಪಾಲರಾಗಲೀ, ಆಡಳಿತ ವರ್ಗವಾಗಲೀ ಇನ್ನೂ ಆರಾಧ್ಯನವರನ್ನು ಕಾಲೇಜಿಗೆ ಸೇರಿಸಿಕೊಂಡಿಲ್ಲ. ಪ್ರಿನ್ಸಿಪಾಲರ ಅಕ್ರಮದಿಂದ ಎರಡು ವರ್ಷಗಳನ್ನು ಕಳೆದುಕೊಂಡ ಶಾಂತ ರೇಣುಕಾರಾಧ್ಯರವರು ಇಗಾಗಲೇ ಪ್ರಿನ್ಸಿಪಾಲರ ಮೇಲೆ ರೂ. 20,000 ನಷ್ಟಕ್ಕೆ ದಾವೆ ಹೂಡಿರುವರು.

ಎಸ್. ಎಫ್. ಐ.ಯವರನ್ನು ಕಾಲೇಜು ವಿದ್ಯಾರ್ಥಿ ಸಂಘದ ಅಧಿಕಾರಕ್ಕೆ ಬರುವುದನ್ನು ತಪ್ಪಿಸಲು ನೇರವಾಗಿ ನಡೆಯುತ್ತಿದ್ದ ಚುನಾವಣೆಗಳನ್ನು 78-79 ರಲ್ಲಿ ರದ್ದುಮಾಡಿ, ಬೇರೆ ಬೇರೆ ಕ್ಲಾಸುಗಳಿಂದ ಪ್ರತಿನಿಧಿಗಳ ಆಯ್ಕೆ ನಡೆದು; ಈ ಪ್ರತಿನಿಧಿಗಳು ಅಧಿಕಾರಿ ವರ್ಗವನ್ನು ಚುನಾಯಿಸುವಂತಹ ಕ್ರಮಗಳನ್ನು ಜಾರಿಗೊಳಿಸಿದರು. ಇದೂ ಸಾಲದೆಂಬಂತೆ ಯಾವ ಪ್ರತಿನಿಧಿಗಳು ಯಾರಿಗೆ ಮತ ಚಲಾಯಿಸಿರುವರೆಂಬುದನ್ನು ಅರಿತು(ಆ ಮೇಲೆ ಅವರ ಮೇಲೆ ಕ್ರಮ ವಹಿಸಲು) ಕೊಳ್ಳಲು ಮತ ಪಟ್ಟಿಗಳ

[ಕಡೆಯ ಪುಟ ನೋಡಿ]

# "ಸರ್ವಾಧಿಕಾರಿ ಮತ್ತು ಜಾತೀಯವಾದಿ ಶಕ್ತಿಗಳನ್ನು ಸೋಲಿಸಿರಿ"

## ಅಖಿಲ ಭಾರತ ವಿದ್ಯಾರ್ಥಿ-ಯುವಜನ ಸಮ್ಮೇಳನದ ಕರೆ

ಭಾರತದ ಏಳು ರಾಷ್ಟ್ರೀಯ ವಿದ್ಯಾರ್ಥಿ ಯುವಜನ ಸಂಘಟನೆಗಳು ಜುಲೈ 21 ಮತ್ತು 22ರಂದು ನವದೆಹಲಿಯ ಐವಾನೆ-ಗಾಲಿಬ್ ಸಭಾಂಗಣದಲ್ಲಿ ನಡೆಸಿದ ಸಮಾವೇಶದಲ್ಲಿ, ಸರ್ವಾಧಿಕಾರಿ ಶಕ್ತಿಗಳು ಮತ್ತು ಜಾತೀಯವಾದಿ ಶಕ್ತಿಗಳನ್ನು ಐಕ್ಯಹೋರಾಟ ಮತ್ತು ಪ್ರಚಾರಗಳ ಮೂಲಕ ಸೋಲಿಸಲು ನಿರ್ಧಾರ ಕೈಗೊಂಡವು. ಅಲ್ಲದೆ, ಪ್ರಜಾಸತ್ತಾತ್ಮಕ ಹಕ್ಕುಗಳು, ವಿದ್ಯಾಭ್ಯಾಸದಲ್ಲಿ ಸುಧಾರಣೆ ಮತ್ತು ಉದ್ಯೋಗ ಸಮಸ್ಯೆಗಳ ಬಗ್ಗೆ ಸಮಾವೇಶ ಚರ್ಚಿಸಿತು.

ಸಮಾವೇಶದಲ್ಲಿ ಭಾಗವಹಿಸಿದ್ದ ಸಂಘಟನೆಗಳು: ಯುವ ಜನತಾ, ಎಸ್. ಎಫ್. ಐ., ಡಿ. ವೈ. ಎಫ್., ಎ. ಐ. ಎಸ್. ಎಫ್., ಎ. ಐ. ವೈ. ಎಫ್., ಯುವಕ ಕಾಂಗ್ರೆಸ್ ಹಾಗೂ ಎನ್. ಎಸ್. ಯು. ಐ. ಸಮಾವೇಶದಲ್ಲಿ ಭಾಗವಹಿಸಿದ 600 ಪ್ರತಿನಿಧಿಗಳ ಪೈಕಿ ಎಸ್. ಎಫ್. ಐ. ಮತ್ತು ಡಿ. ವೈ. ಎಫ್. ಪರವಾಗಿ 240 ಪ್ರತಿನಿಧಿಗಳು ಭಾಗವಹಿಸಿದ್ದರು. ಕರ್ನಾಟಕದ ಪರವಾಗಿ ಕಾಂ. ಇಕ್‌ಬಾಲ್ ಹುಸೇನ್ ಮತ್ತು ಕಾಂ. ಶ್ರೀರಾಮ ರೆಡ್ಡಿ ಇವರುಗಳು ಸಮಾವೇಶದಲ್ಲಿ ಭಾಗವಹಿಸಿದ್ದರು.

ಭಾರತದ ವಿದ್ಯಾರ್ಥಿ ಯುವಜನತೆಯ ಚಳುವಳಿಯಲ್ಲಿ, ಕೆಲವು ಸಾಮಾನ್ಯ ಬೇಡಿಕೆಗಳಿಗಾಗಿ ಎಲ್ಲಾ ಪ್ರಮುಖ ಸಂಘಟನೆಗಳು ಒಂದಾಗುತ್ತಿರುವುದು, ಇದೇ ಮೊದಲಬಾರಿಯಾಗಿದ್ದು, ಸರ್ವಾಧಿಕಾರಿ ಶಕ್ತಿಗಳನ್ನು ಮತ್ತು ಜಾತೀಯವಾದಿ ಶಕ್ತಿಗಳನ್ನು ವಿರೋಧಿಸುವ ಸಮಾವೇಶದ ನಿರ್ಧಾರ, ದೇಶದಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಒಕ್ಕೂಟ ರಚಿಸುವಲ್ಲಿ ಒಂದು ಮೈಲಿಗಲ್ಲಾಗಿದೆ.

ಸಮ್ಮೇಳನವನ್ನು ಉದ್ಘಾಟಿಸಿದ ಮಧುಲಿಮಯೆ ಮಾತನಾಡುತ್ತಾ: ಕೇಂದ್ರದಲ್ಲಿ ಉಂಟಾಗಿರುವ ರಾಜಕೀಯ ಬಿಕ್ಕಟ್ಟನ್ನು ಪ್ರಸ್ತಾಪಿಸಿ. ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳು ಒಂದಾಗಿ ಬದಲಿ ಸರ್ಕಾರ ರಚಿಸಬೇಕೆಂದರು.

ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಕಾಂ. ಇ. ಎಂ. ಎಸ್. ನಂಬೂದಿರಿಪಾದ್‌ರವರು, ಸಾಮಾನ್ಯ ಬೇಡಿಕೆಗಳಿಗಾಗಿ, ವಿದ್ಯಾರ್ಥಿ-ಯುವ ಜನತೆಯ ಐಕ್ಯಹೋರಾಟದ ಮಹತ್ವವನ್ನು ತಿಳಿಸಿದರು. ಬದಲಿ ಸರ್ಕಾರ ರಚಿಸುವಲ್ಲಿ, ಎಲ್ಲಾ ಸರ್ವಾಧಿಕಾರಿ ವಿರೋಧಿ ಶಕ್ತಿಗಳು ನಿಕಟವಾಗಲು ಕರೆ ನೀಡಿದರು. ಅದರಲ್ಲಿಯೂ, ಜನತಾ ಪಕ್ಷದಲ್ಲಿರುವ ಸಮಾಜವಾದಿಗಳು, ಆರೆಸ್ಸೆಸ್- ಜನಸಂಘವನ್ನು ತೊರೆದು, ಪ್ರಜಾಸತ್ತಾತ್ಮಕ ಪ್ರವಾಹವನ್ನು ಸೇರಬೇಕೆಂದು, ಮಾಜಿ ಸಮಾಜವಾದಿ ಪಕ್ಷದವರಿಗೆ ಮನವಿ ಮಾಡಿದರು. ಸದ್ಯದ ರಾಜಕೀಯ ಪರಿಸ್ಥಿತಿಯಲ್ಲಿ, ಐಕ್ಯಹೋರಾಟವೊಂದೇ ಮಾರ್ಗವಾಗಿರುವುದರಿಂದ, ವಿದ್ಯಾರ್ಥಿ-ಯುವ ಜನತೆಯು ಈ ಐಕ್ಯತೆಯನ್ನು ಉಳಿಸಿಕೊಂಡು ಹೋಗಬೇಕೆಂದು ಪ್ರತಿನಿಧಿಗಳಿಗೆ ತಿಳಿಹೇಳಿದರು.

ಸರ್ವಾಧಿಕಾರಿ ಶಕ್ತಿಗಳು ಮತ್ತು ಜಾತೀಯವಾದದ ವಿರುದ್ಧ ವಿದ್ಯಾರ್ಥಿ ಯುವಜನತೆ ಐಕ್ಯ ವೇದಿಕೆ ರಚಿಸಿರುವುದನ್ನು ಸ್ವಾಗತಿಸಿದ, ಭೂಪೇಶ್‌ಗುಪ್ತಾರವರು ಜಾತೀಯತೆಯ ಅಪಾಯವನ್ನು ಅರಿಯಲು ಒತ್ತಾಯಿಸಿದರಲ್ಲದೆ, ಐಕ್ಯತೆಯನ್ನು ಉಳಿಸಿಕೊಂಡು ಬರಬೇಕೆಂದು ಪ್ರತಿನಿಧಿಗಳಿಗೆ ಕರೆಯಿತ್ತರು.

ಶರದ್‌ಯಾದವ್, ಎಂ. ಪಿ. ಹಾಗೂ ಯುವಜನತಾ ಅಧ್ಯಕ್ಷರು ಸಮಾವೇಶದ ಮುಖ್ಯ ಪ್ರಣಾಳಿಕೆಯನ್ನು ಮಂಡಿಸಿದರು. ಕಾಂ. ಎಂ. ಎ. ಬೇಬಿ, ಎಸ್. ಎಫ್. ಐ. ಅಧ್ಯಕ್ಷರು ಅದನ್ನು ಅನುಮೋದಿಸಿದ ನಂತರ, ಇತರ ಸಂಘಟನೆಗಳ ತಲಾ ಒಬ್ಬೊಬ್ಬ ಪ್ರತಿನಿಧಿಗಳು ಪ್ರಣಾಳಿಕೆಯನ್ನು ಬೆಂಬಲಿಸಿ ಮಾತನಾಡಿದರು. ನಂತರ ಪ್ರಣಾಳಿಕೆಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ವಿವಿಧ ಸಂಘಟನೆಗಳ 20 ಪ್ರತಿನಿಧಿಗಳು ಮಾತನಾಡಿ, ಐಕ್ಯತೆಯನ್ನು ಕಾಪಾಡಿಕೊಂಡು ಬರಬೇಕಾದ ಅಗತ್ಯವನ್ನು ಒತ್ತಿ ಹೇಳಿದರು. ನಂತರ, ಕಾಂ. ನೇಪಾಲ್‌ದೇವ್ ಭಟ್ಟಾಚಾರ್ಯ, ಎಸ್. ಎಫ್. ಐ. ಪ್ರಧಾನ ಕಾರ್ಯದರ್ಶಿಯವರು, ಮುಂದಿನ ಯೋಜನೆಗಳನ್ನು ಸಿದ್ಧತಾ ಸಮಿತಿಯ ಪರವಾಗಿ ಸಭೆಯ ಮುಂದೆ ಇಟ್ಟರು. ಸಭೆ ಅದನ್ನು ಸರ್ವಾನುಮತದಿಂದ ಅಂಗೀಕರಿಸಿತು.

ಎಲ್ಲಾ ಸಂಘಟನೆಗಳ ಪ್ರತಿನಿಧಿಗಳುಳ್ಳ ಜಂಟಿ ಕ್ರಿಯಾ ಸಮಿತಿಯನ್ನು ರಚಿಸಲಾಯಿತು. ಇಂತಹ ಸಮಾವೇಶಗಳನ್ನು ಪ್ರತಿ ರಾಜ್ಯದಲ್ಲಿಯೂ ಮಾಡಬೇಕೆಂದು ತೀರ್ಮಾನಿಸಲಾಯಿತು, ಮತ್ತು ಸೆಪ್ಟೆಂಬರ್ 20ನ್ನು ಸರ್ವಾಧಿಕಾರಿ ಜಾತೀಯವಾದಿ ವಿರೋಧಿ ದಿನವನ್ನಾಗಿ ಅಖಿಲ ಭಾರತ ಮಟ್ಟದಲ್ಲಿ ಆಚರಿಸುವುದು, ಪ್ರಜಾಸತ್ತಾತ್ಮಕ ಹಕ್ಕುಗಳು, ವಿದ್ಯಾಭ್ಯಾಸ ಪದ್ಧತಿಯಲ್ಲಿ ಸುಧಾರಣೆ ಮತ್ತು ನಿರುದ್ಯೋಗ ನಿವಾರಣೆಯ ಬೇಡಿಕೆಗಳನ್ನು ಮುಂದಿಡಬೇಕೆಂದು ತೀರ್ಮಾನಿಸಲಾಯಿತು. ಬೇಡಿಕೆಗಳ ಬಗ್ಗೆ ಪಾರ್ಲಿಮೆಂಟ್ ಭವನದ ಮುಂದೆ ಪ್ರತಿಭಟನೆ ಪ್ರದರ್ಶನ ನಡೆಸಲು, ಯೋಜನೆ ಹಾಕಲು ಜಂಟಿ ಕ್ರಿಯಾ ಸಮಿತಿಗೆ ಸಮಾವೇಶ ಅಧಿಕಾರ ನೀಡಿತು.

**ಪ್ರಣಾಳಿಕೆಯ ಬೇಡಿಕೆಗಳು :**

**ಎ) ಪ್ರಜಾಸತ್ತಾತ್ಮಕ ಹಕ್ಕುಗಳು**

1. ಸಂವಿಧಾನದಿಂದ, ಆಂತರಿಕ ತುರ್ತು ಪರಿಸ್ಥಿತಿ ಮತ್ತು ಸ್ಥಾನಬದ್ಧತಾ ಕಾನೂನನ್ನು ತೆಗೆಯುವುದು.

2. ಸಂಘವನ್ನು ರಚಿಸಿಕೊಳ್ಳಲು ಹಕ್ಕು ಹಾಗೂ ವಾಕ್‌ಸ್ವಾತಂತ್ರ್ಯವನ್ನು ಎಲ್ಲಾ ಜನತೆಗೆ ನೀಡುವುದು.

3. ಬೇಪರತ್ತಿನಿಂದ ಎಲ್ಲಾ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವುದು.

4. ಮತದಾನದ ಹಕ್ಕನ್ನು 18ಕ್ಕೆ ಇಳಿಸುವುದು.

5. ಸೆಕೆಂಡರಿ ಶಾಲೆಯಿಂದ ಪ್ರತಿಯೊಂದು ಶಾಲಾ-ಕಾಲೇಜುಗಳಲ್ಲಿ ಆಯ್ಕೆಯಾದ ವಿದ್ಯಾರ್ಥಿ ಸಂಘಗಳಿರಬೇಕು, ಪ್ರತಿಯೊಬ್ಬ ವಿದ್ಯಾರ್ಥಿಯೂ ಕಡ್ಡಾಯವಾಗಿ ಸಂಘದ ಸದಸ್ಯನಾಗಬೇಕು.

6. ನೀತಿ-ನಿರೂಪಣಾ ಸಮಿತಿಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರಾತಿನಿಧ್ಯ.

7. ಕೇಂದ್ರ ಮತ್ತು ರಾಜ್ಯಗಳಲ್ಲಿ, ವಿದ್ಯಾಭ್ಯಾಸಕ್ಕೆ ಸಂಬಧಿಸಿದ ನೀತಿ-ನಿರೂಪಣೆಯ ಬಗ್ಗೆ ರಾಷ್ಟ್ರೀಯ ವಿದ್ಯಾರ್ಥಿ ಸಂಘಗಳ ಪ್ರತಿನಿಧಿಗಳ ಒಂದಿಗೆ ಸಮಾಲೋಚನೆ ನಡೆಸಬೇಕು.

**ಬಿ) ವಿದ್ಯಾಭ್ಯಾಸ ಸುಧಾರಣೆ**

1. ವಿದ್ಯಾಭ್ಯಾಸಕ್ಕೆ ಶೇ. 10 ರಷ್ಟು ಬಜೆಟ್ ಮೀಸಲಾಗಿಡಬೇಕು.

2. ಸೆಕೆಂಡರಿ ಶಾಲೆಯವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ.

3. ಮಾತೃಭಾಷೆಯನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡಬೇಕು.

4. ವೈಜ್ಞಾನಿಕ ಶಿಕ್ಷಣ ಪದ್ಧತಿ, ಜಾತ್ಯಾತೀತತೆ ಶಿಕ್ಷಣವನ್ನು ಕೆಲಸದ ಆಧಾರದ ಮೇಲೆ ಹಾಗೂ ಬಿಡುವಿನ ವೇಳೆಯಲ್ಲಿ ಕಲಿಯಲು ಅವಕಾಶ.

5. ಸೆಕೆಂಡರಿ ಶಾಲೆಯಿಂದ ವಿದ್ಯಾಭ್ಯಾಸವನ್ನು ಕುಂಠಿತಗೊಳಿಸಬಾರದು.

7. ಪರೀಕ್ಷಾ ವಿಧಾನದಲ್ಲಿ ಸುಧಾರಣೆ.

8. ಖಾಸಗಿ ಶಾಲಾ-ಕಾಲೇಜುಗಳನ್ನು ರದ್ದುಗೊಳಿಸುವುದು.

**ಸಿ) ನಿರುದ್ಯೋಗ**

1. ದುಡಿಯುವ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಮಾಡುವುದು.

2. ನಿರುದ್ಯೋಗ ಭತ್ಯವನ್ನು ನೀಡುವ ಯೋಜನೆಗಳು ಕೂಡಲೇ ಕಾರ್ಯರೂಪಕ್ಕೆ ಬರಬೇಕು.

ಸಮ್ಮೇಳನ, ಆನಂದ ಮಾರ್ಗ ತನ್ನ ಅಂಗಸಂಸ್ಥೆಯಾದ "ಆಮ್ರಾ ಬಂಗಾಲಿ" ಮೂಲಕ ಪ.ಬಂಗಾಳ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಅಧಿಕಾರ ನಡೆಸುತ್ತಿರುವ ಎಡರಂಗದ ಸರಕಾರಗಳನ್ನು ಉರುಳಿಸಲು ಪ್ರಯತ್ನಿಸುತ್ತಿರುವುದನ್ನು ಖಂಡಿಸಿತು. ದೇಶದ ಎಲ್ಲಾ ಎಡ ಮತ್ತು ಪ್ರಜಾಸತ್ತಾತ್ಮಕ ವಿದ್ಯಾರ್ಥಿ-ಯುವ ಜನತೆ ಒಂದಾಗಿ ಇಂತಹ ಜಾತಿಯವಾದಿ, ಪ್ರಾಂತೀಯವಾದಿ ದುಷ್ಟಶಕ್ತಿಗಳ ವಿರುದ್ಧ ಹೋರಾಟ ಮಾಡುವುದರ ಮೂಲಕ ನವ ಸಮಾಜವಾದಿ ಭಾರತವನ್ನು ಕಟ್ಟಲು ಶ್ರಮಿಸಬೇಕೆಂದು ಕರೆ ನೀಡಿತು. ●

---

### ಎಸ್. ಎಫ್. ಐ. ಕೇಂದ್ರ ಸಮಿತಿ ಸಭೆ

# ಹೋರಾಟಕ್ಕೆ ಸಿದ್ಧರಾಗಲು ವಿದ್ಯಾರ್ಥಿಗಳಿಗೆ ಕರೆ

ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ.)ನ ಕೇಂದ್ರ ಕಾರ್ಯಕಾರಿ ಸಮಿತಿ ಸಭೆ ಜುಲೈ 18, 19, ಮತ್ತು 20 ರಂದು ನವದೆಹಲಿಯಲ್ಲಿ ನಡೆಯಿತು. ಪಾಟ್ನಾ ನಗರದಲ್ಲಿ ನಡೆದ ಮೂರನೇ ರಾಷ್ಟ್ರೀಯ ಸಮ್ಮೇಳನದ ನಂತರ ಕೇಂದ್ರ ಸಮಿತಿ ಮತ್ತು ರಾಜ್ಯ ಸಮಿತಿಗಳು ಮಾಡಿರುವ ಕೆಲಸವನ್ನು ವಿಮರ್ಶಿಸಲಾಯಿತು. ಹಣಕಾಸು, ಸದಸ್ಯತ್ವ, ಸಾಹಿತ್ಯ, ಕೇಂದ್ರ ಕಛೇರಿ, ಎಸ್. ಎಫ್. ಐ. ಪತ್ರಿಕೆ, ಮುಂದಿನ ಯೋಜನೆಗಳ ಬಗ್ಗೆ ಕೇಂದ್ರ ಸಮಿತಿ ಸೆಕ್ರೆಟಾರಿಯಟ್ ಮಂಡಿಸಿದ ವರದಿಯನ್ನು ಕೇಂದ್ರಕಾರ್ಯಕಾರಿ ಸಮಿತಿ ಸರ್ವಾನುಮತದಿಂದ ಅಂಗೀಕರಿಸಿತು. ಸಂಘಟನಾ ನಿರ್ಣಯವನ್ನು ಚರ್ಚಿಸಿ, ಕೆಲವು ತಿದ್ದುಪಡಿಗಳೊಡನೆ ನಿರ್ಣಯವನ್ನು ಅಂಗೀಕರಿಸಲಾಯಿತು.

**ಐಕ್ಯ ಹೋರಾಟ:**

ಅಖಿಲ ಭಾರತ ಸಮ್ಮೇಳನದಲ್ಲಿ ಕೈಗೊಂಡ ತೀರ್ಮಾನದಂತೆ, ಭಾರತ ವಿದ್ಯಾರ್ಥಿ ಫೆಡರೇಶನ್ ಮತ್ತು ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್‌ಗಳು ಇತರ ರಾಷ್ಟ್ರೀಯ ವಿದ್ಯಾರ್ಥಿ ಮತ್ತು ಯುವಜನ ಸಂಘಟನೆಗಳ ಜೊತೆ ಸೇರಿ ಜುಲೈ 21 ಮತ್ತು 22ರಂದು ನಡೆಸಿದ ಸರ್ವಾಧಿಕಾರಿ ವಿರೋಧಿ, ಜಾತೀಯವಾದಿ ವಿರೋಧಿ ಸಮಾವೇಶ ಮತ್ತು ಪ್ರಣಾಳಿಕೆಯನ್ನು ಸ್ವಾಗತಿಸಲಾಯಿತು. ಎಲ್ಲಾ ರಾಜ್ಯಗಳಲ್ಲೂ ಐಕ್ಯಹೋರಾಟಗಳನ್ನು ಬಲಪಡಿಸಲು ಕೇಂದ್ರ ಸಮಿತಿ ಕರೆ ನೀಡಿದೆ.

ದೇಶದಲ್ಲಿ ಉದ್ಭವಿಸಿರುವ ಪ್ರಸಕ್ತ ರಾಜಕೀಯ ಪರಿಸ್ಥಿತಿಯನ್ನು ವಿವರ್ಶಿಸಲಾಯಿತು. ಲೋಕ ಸಭೆಯ ಎಲ್ಲಾ ಎಡಪಕ್ಷಗಳು ಒಂದಾಗಿ ವೇದಿಕೆಯನ್ನು ರಚಿಸಿರುವುದನ್ನು ಒಳ್ಳೆಯ ಬೆಳವಣಿಗೆಯೆಂದು ಕೇಂದ್ರ ಕಾರ್ಯಕಾರಿ ಸಮಿತಿ ಗುರುತಿಸಿದೆ. ಜಾತೀಯವಾದಿ ಶಕ್ತಿಗಳು ಮತ್ತು ಸರ್ವಾಧಿಕಾರಿ ಶಕ್ತಿಗಳನ್ನು ವಿರೋಧಿಸುವ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ನಿಲುವನ್ನು ಸ್ವಾಗತಿಸಿದ ಕೇಂದ್ರಸಮಿತಿ, ಪಕ್ಷವು ಅತ್ಯಂತ ಸೂಕ್ತವಾದ ನಿಲುವನ್ನು ತಳೆದಿರುವುದಕ್ಕೆ ಪಕ್ಷವನ್ನು ಅಭಿನಂದಿಸಿದೆ.

**ಮುಂದಿನ ಯೋಜನೆಗಳು:**

ಆಗಸ್ಟ್ ತಿಂಗಳು 8ರಿಂದ 15ನೇ ತಾರೀಖಿನವರೆಗೆ "ಮತೀಯ ಸೌಹಾರ್ದತೆ ಮತ್ತು ಪ್ರಜಾಸತ್ತೆಯನ್ನು ಉಳಿಸಿ" ವಾರವನ್ನು ಆಚರಿಸಲಾಗುವುದು. ಜನಗಳಿಗೆ, ಅದರಲ್ಲಿಯೂ ವಿದ್ಯಾರ್ಥಿ ಯುವಜನತೆಯಲ್ಲಿ, ಮೇಲೆ ಕಾಣಿಸಿದ ಘೋಷಣೆಯ ಮಹತ್ವವನ್ನು ತಲುಪಿಸುವುದು ವಾರಾಚರಣೆಯ ಉದ್ದೇಶ. ದೇಶದಲ್ಲಿ ಮತೀಯ ಸೌಹಾರ್ದತೆ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಉಳಿಸಿಕೊಂಡು ಬರಲು ಆಸಕ್ತಿ ಇರುವ ವಿಶಾಲ ವಿದ್ಯಾರ್ಥಿ ವೃಂದವನ್ನು ತಲುಪುವುದು, ಈ ವಿಶಾಲ ವೃಂದದ ಸಹಾಯದಿಂದ ಎಲ್ಲಾ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಹೋರಾಟ ನಡೆಸುವುದು ಎಸ್.ಎಫ್ ಐ.ನ ಗುರಿ.

ಅಖಿಲ ಭಾರತ ಬೇಡಿಕೆ ದಿನವನ್ನಾಗಿ ಸೆಪ್ಟೆಂಬರ್ 14ನೇ ದಿನವನ್ನು ಆಚರಿಸಲಾಗುವುದು. ಕೆಳಗೆ ಕಾಣಿಸಿದ ಬೇಡಿಕೆಗಳಿಗಾಗಿ ಸಭೆ, ಮೆರವಣಿಗೆ ಮುಂತಾದವನ್ನು ನಡೆಸಲು ಕೇಂದ್ರ ಸಮಿತಿ ನಿರ್ಧರಿಸಿದೆ.

**ಬೇಡಿಕೆಗಳು :**

1) ಸೆಕೆಂಡರಿ ಶಾಲೆಯವರೆಗೆ ಉಚಿತ ಶಿಕ್ಷಣ,

2) ಮಾತೃಭಾಷೆಯನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡುವುದು,

3) ಕೇಂದ್ರ ಬಜೆಟ್‌ನಲ್ಲಿ ಶೇ. 10 ರಷ್ಟನ್ನು ವಿದ್ಯಾಭ್ಯಾಸಕ್ಕೆ ಮೀಸಲಾಗಿಡಬೇಕು,

4) ಖಾಸಗಿ ಶಾಲಾ-ಕಾಲೇಜುಗಳ ರದ್ಧತಿ,

5) ವೈಜ್ಞಾನಿಕ ಶಿಕ್ಷಣ ಪದ್ಧತಿ ಮತ್ತು ಪರೀಕ್ಷಾ ವಿಧಾನ,

6) ಶಿಕ್ಷಣವನ್ನು ಸಂವಿಧಾನದಲ್ಲಿ, ರಾಜ್ಯಗಳ ಪಟ್ಟಿಯಲ್ಲಿ ಸೇರಿಸುವುದು,

7) ವಿದ್ಯಾರ್ಥಿಗಳಿಂದ ನೇರವಾಗಿ ಆಯ್ಕೆಯಾಗುವ ವಿದ್ಯಾರ್ಥಿ ಸಂಘ ಮತ್ತು ವಿದ್ಯಾರ್ಥಿಗಳು ಕಡ್ಡಾಯವಾಗಿ ಸಂಘಕ್ಕೆ ಸದಸ್ಯರಾಗಬೇಕು,

8) ಮತದಾನ ಚಲಾಯಿಸುವ ವಯಸ್ಸನ್ನು 18 ವರ್ಷಕ್ಕೆ ಇಳಿಸುವುದು,

[7ನೇ ಪುಟ ನೋಡಿ]

# ಅಸ್ಸಾಂನಲ್ಲಿ ಪ್ರತಿಗಾಮಿಗಳ ವಿನಾಶಕಾರಿ ಪ್ರಚಾರದ ಹೆಚ್ಚಳ

ಏರುತ್ತಿರುವ ಬೆಲೆಗಳು ಮತ್ತು ಮುಂಬರುವ ಅಕ್ಕಿ ಅಭಾವದ ದೆಸೆಯಿಂದ, ದೇಶದ ಇತರ ಕಡೆಗಳಲ್ಲಿಯಂತೆಯೇ ಅಸ್ಸಾಂನಲ್ಲೂ ಆರ್ಥಿಕ ಪರಿಸ್ಥಿತಿ ಹದಗೆಡುತ್ತಿದೆ.

ಅಕ್ಕಿ ಸರಬರಾಜು ಈಗಾಗಲೇ ಕಡಿಮೆಯಾಗಿದೆ. ಮುಂಬರುವ ದಿನಗಳಿಗೆ ದಾಸ್ತಾನು ಇಟ್ಟುಕೊಳ್ಳುವ ಎಚ್ಚರವಹಿಸದೆ, ರಾಜ್ಯ ಜನತಾಸರ್ಕಾರವು ತನ್ನ ಸ್ವತಂತ್ರ ವ್ಯಾಪಾರ ನೀತಿಯ ಪ್ರಕಾರ, ಭಾರತ ಆಹಾರ ನಿಗಮ ಮತ್ತು ರಾಜ್ಯ ಒಡೆತನದ ಗೋದಾಮುಗಳಲ್ಲಿದ್ದ ಎಲ್ಲ ದಾಸ್ತಾನನ್ನೂ ಮಾರಿಬಿಟ್ಟಿತು.

ತೀವ್ರ ಕ್ಷಾಮದಿಂದ ಬೇಸಗೆ ಬೆಳೆಗಳು ಹಾನಿಗೀಡಾಗಿದ್ದರೆ, ಚಳಿಗಾಲದ ಬೆಳೆಕೂಡ ಅನಿಶ್ಚಿತವಾಗಿದ್ದು, ಗೋದಾಮುಗಳು ಖಾಲಿಯಾಗಿರುವ ಸಮಯದಲ್ಲೇ ಬಿಕ್ಕಟ್ಟಿನ ಆಹಾರ ಪರಿಸ್ಥಿತಿ ಉದ್ಭವಿಸುತ್ತದೆ. ಜನತೆ ತುಂಬ ಕಷ್ಟದ ದಿನಗಳನ್ನು ಎದುರಿಸಬೇಕಾಗಿದೆ. ರಾಜ್ಯದಲ್ಲಿ ಈಗಾಗಲೇ ಹಸಿವಿನಿಂದ ಸತ್ತ ವರದಿಗಳು ಬರುತ್ತಿವೆ.

ಜನತೆಯ ಅಸಮಾಧಾನವು ಸಹಜವಾಗಿಯೇ ಬೆಳೆದು ವ್ಯಾಪಕವಾಗಿ ಹರಡುತ್ತಿದೆ.

ಜೂನ್ ಒಂದರಿಂದ ಹದಿನೈದರವರೆಗೆ "ಪ್ರತಿಭಟನಾ ಪಕ್ಷ" ವನ್ನು ಆಚರಿಸಿದ ಅವಧಿಯಲ್ಲಿ, ಒಂದು ಪ್ರತಿಭಟನಾ ಚಳುವಳಿಯನ್ನು ಪ್ರೇರೇಪಿಸಲು ಮತ್ತು ರಾಜ್ಯದಾದ್ಯಂತ ಒಗ್ಗೂಡಿಸಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಸ್ಸಾಂ ರಾಜ್ಯಸಮಿತಿ ಯತ್ನಿಸಿದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಪ್ರತಿಭಟನಾ ಪ್ರದರ್ಶನಗಳು ನಡೆದು ಇದಕ್ಕೆ ಒಳ್ಳೆಯ ಪ್ರತಿಕ್ರಿಯೆ ಬಂದಿದೆ. ನಗರ ಪ್ರದೇಶಗಳಿಗಿಂತ ಗ್ರಾಮೀಣ ಪ್ರದೇಶಗಳ ಜನತೆ ಇದರಲ್ಲಿ ಹೆಚ್ಚು ಹೆಚ್ಚಾಗಿ ಭಾಗವಹಿಸಿದ್ದರು. ಗ್ರಾಮೀಣ ಪ್ರದರ್ಶನಗಳಲ್ಲಿ ಭಾಗವಹಿಸಿದ ಮಹಿಳೆಯರ ಸಂಖ್ಯೆ ಗಮನಾರ್ಹವಾಗಿತ್ತು.

ಈ ಚಳುವಳಿಯನ್ನು ವಿಶಾಲಗೊಳಿಸುವ ಸಲುವಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿಯು ರಾಜ್ಯದ ಇತರ ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳೊಡನೆ ಮಾತುಕತೆ ನಡೆಸಲಾರಂಭಿಸಿತು. ಆರ್.ಎಸ್.ಪಿ. ಮತ್ತು ಭಾರತೀಯ ಕಮ್ಯುನಿಸ್ಟ್ ಪಕ್ಷಗಳು ಮಾತ್ರ ಇದರೊಡನೆ ಬರಲು ಒಪ್ಪಿಕೊಂಡವು.

**ವಿನಾಶಕಾರಿ ಶಕ್ತಿಗಳ ಚಟುವಟಿಕೆ :**

ಜನತಾಸರ್ಕಾರದ ನೀತಿಯಿಂದ ತಮ್ಮ ಮೇಲೆ ಬಂದಿರುವ ಸಂಕಷ್ಟಗಳು ಬೆಳೆಯುತ್ತಿರುವುದನ್ನು ವಿರೋಧಿಸಿ ಜನತೆ ಒಗ್ಗೂಡುತ್ತಿದ್ದರೆ, ಪ್ರತಿಗಾಮಿ ಶಕ್ತಿಗಳು ತಮ್ಮ ವಿನಾಶಕಾರಿ ಚಟುವಟಿಕೆಗಳನ್ನು ಆರಂಭಿಸಿವೆ.

ಮಿಜೋ ರಾಷ್ಟ್ರೀಯರಂಗದ ಅಂಶಗಳು ಮಿಜೋ ಅಲ್ಲದ ಇಂಜಿನಿಯರ್ ಅನ್ನು ಕೊಲೆಮಾಡಿದ ಮೇಲೆ, ಜೂನ್ ಹದಿನೈದರಂದು, ಮಿಜೋರಾಂನ ರಾಜಧಾನಿ ಐಜ್ವಾಲ್‌ಗೂ ಭಾರತದ ಇತರ ಭಾಗಕ್ಕೂ ಸಂಪರ್ಕ ಕಲ್ಪಿಸುವ ಏಕೈಕ ರಸ್ತೆಯ ತಿರುವಾದ ಸಿಲ್ಚಾರ್‌ನಲ್ಲಿ ಮಿಜೋ ವಿರೋಧಿ ದಂಗೆಗಳು ಆರಂಭವಾದವು. ಆರೆಸ್ಸೆಸ್, ಅಮ್ರುಬಂಗಾಲಿ, ಆನಂದ ಮಾರ್ಗಗಳು ಮತ್ತು ಇಂದಿರಾ ಕಾಂಗ್ರೆಸ್ಸಿಗರ ನೇತೃತ್ವದಲ್ಲಿ ಪ್ರಚೋದಿತರಾದ ಜನರಿಂದ ಮೂವರು ಮುಗ್ಧ ಮಿಜೋಗಳು ಕೊಲೆ ಮಾಡಲ್ಪಟ್ಟರು. ಕೆಲವು ಜನತಾಪಕ್ಷದ ನಾಯಕರೂ ಕೂಡ ದಂಗೆಕೋರರನ್ನು ಪ್ರಚೋದಿಸಿ, ಪೋಲೀಸ್ ಮತ್ತು ಅಧಿಕಾರಶಾಹಿಯು ಸುಮ್ಮನೆ ಕೂಡುವಂತೆ ಪ್ರಭಾವ ಬೀರಿದರು. "ಮಿಜೋಗಳಿಗೆ ಒಂದು ಪಾಠ ಕಲಿಸಲು" ಅಧಿಕಾರಶಾಹಿಯ ಒಂದು ವರ್ಗ ಉತ್ಸುಕವಾಗಿತ್ತು.

ಈ ಘಟನೆಗಳಿಂದ ಮಿಜೋರಾಮ್‌ಗಿದ್ದ ಏಕೈಕ ಸಂಪರ್ಕ ಮತ್ತು ಸರಬರಾಜು ಮಾರ್ಗವು ಕೆಟ್ಟುಹೋಗಿ, ದೇಶದ ಪ್ರಜಾಪ್ರಭುತ್ವವಾದಿ ಚಳುವಳಿಯೊಂದಿಗೆ ಮಿಜೋಗಳ ರಾಜಕೀಯ ಹೋರಾಟವನ್ನು ಬೆಸೆಯುವ ಪ್ರಯತ್ನಗಳಿಗೆ ತುಂಬ ಹಾನಿಯಾಯಿತು. ಹಾಗೆ ನೋಡಿದರೆ, ಇವು ಮಿಜೋ ರಾಷ್ಟ್ರೀಯ ರಂಗದ ಪ್ರತ್ಯೇಕತಾವಾದಿ ಉಗ್ರಗಾಮಿಗಳ ಬಲವನ್ನು ಹೆಚ್ಚಿಸಿವೆ.

ತಮ್ಮ ಸ್ಥಾನವನ್ನು ಬಲಪಡಿಸಿಕೊಳ್ಳುವ ಸಲುವಾಗಿ ಈ ಪರಿಸ್ಥಿತಿಯ ಲಾಭ ಪಡೆಯಲು ಕೆಲವು ಇಂದಿರಾ ಕಾಂಗ್ರೆಸ್ಸಿಗರು ಮತ್ತು ಅಷ್ಟೇನೂ ಒಳ್ಳೆಯ ಹಿನ್ನೆಲೆಯಿಲ್ಲದ ಜನತಾನಾಯಕರು ಪ್ರಯತ್ನಿಸುತ್ತಿದ್ದಾರೆ. ಕಾಚಾರ್ ಜಿಲ್ಲೆಯ 15,000 ಮಿಜೋ ಅಲ್ಲದ ಜನ ಮಿಜೋರಾಂನಲ್ಲಿ ಕೆಲಸಮಾಡುತ್ತಿದ್ದಾರೆ ಮಿಜೋ ರಾಷ್ಟ್ರೀಯ ರಂಗವು ಅವರಿಗೆ ನೀಡಿರುವ "ತೊಲಗಬೇಕೆಂಬ" ನೋಟೀಸಿನ ಲಾಭ ಪಡೆದು ಮಿಜೋಗಳ ಬಗ್ಗೆ ಭಯ ಮತ್ತು ದ್ವೇಷ ಹುಟ್ಟಿಸುವ ಪ್ರಯತ್ನಗಳು ನಡೆಯುತ್ತಿವೆ.

ಕೇಂದ್ರದಲ್ಲಿರುವ ಜನತಾ ಸರ್ಕಾರವು ತನ್ನ ಹಿಂದಿನ ಕಾಂಗ್ರೆಸ್ ಆಡಳಿತದ ನೀತಿಗಳನ್ನೇ ಅಂಧವಾಗಿ ಅನುಸರಿಸಿದೆ. ತಮ್ಮ ದುಷ್ಕೃತ್ಯಗಳಿಗೆ ಹೆಸರಾಗಿರುವ ಅಧಿಕಾರಶಾಹಿ ಮತ್ತು ಶಿಸ್ತುಪಡೆಗಳ ಮೇಲೆ ಅವರು ಜವಾಬ್ದಾರಿ ಹೊರಿಸಿರುವರು. ಮಿಜೋಗಳ ಸಮಸ್ಯೆಗೆ ಪರಿಹಾರ ಸುಲಭವಲ್ಲ. ಏಕೆಂದರೆ ಅವರ ಅತ್ಯುಗ್ರ ಪ್ರತ್ಯೇಕತಾಭಾವನೆಯನ್ನು ಉಪಯೋಗಿಸಿಕೊಂಡು ಭಾರತದಿಂದ ಅವರನ್ನು ಬೇರ್ಪಡಿಸಲು ಕ್ರೈಸ್ತ ಮಿಷನರಿಗಳು ಪ್ರಯತ್ನಿಸಿದ್ದಾರೆ. ಈ ಪ್ರತ್ಯೇಕತಾವಾದವನ್ನು ತೊಡೆದುಹಾಕಬೇಕೆನ್ನುವುದೇನೋ ನಿಜ, ಆದರೆ ಇದುವರೆಗಿನ ದಬ್ಬಾಳಿಕೆ ಕ್ರಮಗಳು ಇನ್ನಷ್ಟು ಅದನ್ನು ಹೆಚ್ಚಿಸಿವೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾಚಾರ್ ಜಿಲ್ಲಾ ಸಮಿತಿಯು ಈ ಮಿಜೋ ವಿರೋಧಿ ಚಟುವಟಿಕೆಗಳಿಗೆ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾ, ದಂಗೆಗಳ ಪ್ರಚೋದಕರನ್ನು ವಿರೋಧಿಸಿ ಹೇಳಿಕೆ ಕೊಟ್ಟಿತು. ಈ ಹೇಳಿಕೆಗೆ ಎಲ್ಲ ಕಡೆಯಿಂದ ಅದರಲ್ಲೂ ಮಿಜೋರಾಮ್‌ನಿಂದ ಪ್ರಶಂಸೆಗಳು ಬಂದವು. ಏಕೆಂದರೆ ಅಂಥ ಉಗ್ರ ಮಿಜೋವಿರೋಧಿ ಉನ್ಮತ್ತತೆಯ ಮಧ್ಯೆ ಇಂಥ ದೃಢ ನಿಲುವನ್ನು ತಳೆದದ್ದು ಇದೊಂದೇ ಪಕ್ಷವೇ.

**ಅಲ್ಪಸಂಖ್ಯಾತರ ಮೇಲೆ ಹಲ್ಲೆ :**

ಪ್ರತಿಗಾಮಿ ಶಕ್ತಿಗಳು ಹಲ್ಲೆಗೆ ಇನ್ನೊಂದು ದಾರಿಯನ್ನೂ ಕಂಡುಕೊಂಡಿದ್ದಾವೆ. ಅದು "ವಿದೇಶಿಯರಿಗೆ" ಸಂಬಂಧಿಸಿದುದಾಗಿದೆ.

ಕೆಳ ಅಸ್ಸಾಮಿನ ಜಿಲ್ಲೆಗಳಲ್ಲಿ ಮುಸ್ಲಿಮ್ ವಲಸೆಗಾರರು, ಬಂಗಾಲಿ ಮಾತನಾಡುವ ನಿರಾಶ್ರಿತರು ಜನಸಂಖ್ಯೆಯ ಮುಖ್ಯ ಭಾಗವನ್ನು ತುಂಬುತ್ತಾರೆ. ಮತಧಾರ ಪಟ್ಟಿಯಲ್ಲಿ "ವಿದೇಶಿಯರ"ನ್ನೂ ಸೇರಿಸಿರುವುದರ ಬಗ್ಗೆ ಹುಯಿಲೆಬ್ಬಿಸುತ್ತ, ಪಟ್ಟಿಯನ್ನು ತನಿಖೆಮಾಡಬೇಕೆಂದು ಪ್ರತಿಗಾಮಿ ಶಕ್ತಿಗಳು ಒತ್ತಾಯಿಸಿದರು. ಜನತಾ ಸರ್ಕಾರ ಈ ಬೇಡಿಕೆಯನ್ನು ಮನ್ನಿಸಿತು. ಇದರ ಫಲವಾಗಿ, ಉಪಚುನಾವಣೆ ನಡೆಯಬೇಕಿದ್ದ ಒಂದು ಲೋಕಸಭಾ ಕ್ಷೇತ್ರದಲ್ಲಿಯೇ, ತಾವು ವಿದೇಶಿ ರಾಷ್ಟ್ರೀಯರಲ್ಲವೆಂಬುದನ್ನು ದೃಢಪಡಿಸುವಂತೆ 47,000 ಜನರಿಗೆ ನೋಟೀಸು ಕೊಡಲಾಗಿದೆ.

---

**ಅಚಿಂತ್ಯ ಭಟ್ಟಾಚಾರ್ಯ**

---

ಸಾಂಪ್ರದಾಯಿಕ ಪ್ರತಿಗಾಮಿ ಅಂಶಗಳಿಗೆ ಮುಸ್ಲಿಮರು, ಬಂಗಾಲಿಗಳು ಮತ್ತು ನೇಪಾಳೀಯರು ಬಗ್ಗುವಂತೆ ಮಾಡುವುದೇ ಈ ಕೆಲಸದ ನಿಜವಾದ ಉದ್ದೇಶ, ಈ ಲೋಕಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಉಪಚುನಾವಣೆಯಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ವಿರೋಧ ಕಲ್ಪಿಸುವುದೇ ಮುಖ್ಯ ಉದ್ದೇಶವಾಗಿದೆ.

ಮತದಾರರ ಬಗ್ಗೆ ನಡೆಸಿದ ಈ ಕಾನೂನುಬಾಹಿರ ಕ್ರಮವನ್ನು ವಿರೋಧಿಸಿ ಮತ್ತು ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಗಾಗಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಆರ್. ಎಸ್. ಪಿ. ಮತ್ತು ಕಮ್ಯುನಿಸ್ಟ್ ಪಕ್ಷಗಳ ಜೊತೆ ದೃಢ ನಿಲುವನ್ನು ತಳೆದಿದೆ. "ಕೆಲವು ಪ್ರಜಾಪ್ರಭುತ್ವ ವಿರೋಧಿ ರಾಜಕೀಯ ಪಕ್ಷಗಳ ಹಿತದೃಷ್ಟಿಯಿಂದ ಉಪಚುನಾವಣೆಗೆ ಸ್ವಲ್ಪಮುಂಚೆ ಮಂಗಲ್‌ದೊಯ್ ಲೋಕಸಭಾ ಕ್ಷೇತ್ರದ ಮತದಾರ ಪಟ್ಟಿಯನ್ನು ಬದಲಾಯಿಸಿರುವ ವಿಧಾನದ ಬಗ್ಗೆ ಕಾಳಜಿ ವ್ಯಕ್ತಪಡಿಸಿ" ಮೂರು ಪಕ್ಷಗಳೂ ಜಂಟಿ ಹೇಳಿಕೆ ಕೊಟ್ಟಿವೆ.

"ಮಂಗಲ್‌ದೊಯ್‌ನ ಮತದಾರ ದಾಖಲೆ ಅಧಿಕಾರಿಗಳು ಕಾನೂನಿಗೆ ಒಂದಿಷ್ಟೂ ಗೌರವ ತೋರದೆ, ಇದ್ದಕ್ಕಿದ್ದಂತೆ 47,000 ಮತದಾರರಿಗೆ ಅವರು ವಿದೇಶಿ ರಾಷ್ಟ್ರೀಯರಲ್ಲವೆಂದು ದೃಢಪಡಿಸಲು ನೋಟೀಸು ಕೊಟ್ಟಿದ್ದಾರೆ. ಎಲ್ಲ ಕೇಸುಗಳಲ್ಲೂ ಏಕೈಕ ವಕ್ತಾರನ ಆಧಾರದ ಮೇಲೆ ಸಾವಿರ ಮತದಾರರಿಗೆ ನೋಟೀಸು ಕೊಡಲಾಗಿದೆ. ಈ ಎಲ್ಲ ವಕ್ತಾರರೂ, ಉಪಚುನಾವಣೆಯಲ್ಲಿ ಆಸಕ್ತವಾಗಿರುವ ಒಂದು ರಾಜಕೀಯ ಗುಂಪಿಗೆ ಸೇರಿದವರಾಗಿದ್ದಾರೆ" ಎಂದು ಹೇಳಿಕೆ ಕೊಡಲಾಗಿದೆ.

"ಇದು ಅಲ್ಪಸಂಖ್ಯಾತರಲ್ಲಿ ಅಗಾಧ ಭಯವನ್ನು ಉಂಟುಮಾಡಿದೆ" ಮತ್ತು "ಮಂಗಲ್‌ದೊಯ್‌ನಲ್ಲಿ ಇದು ಸಂಸತ್ ಪ್ರಜಾಪ್ರಭುತ್ವದ ಅಣಕವನ್ನು ಮಾಡುವುದರಲ್ಲಿ ಮುಗಿಯುತ್ತದೆ" ಎಂದು ಹೇಳಿ, "ಅಸ್ಸಾಂ ಸರ್ಕಾರವು ಈ ಕೆಲಸವನ್ನು ಕೈಬಿಟ್ಟು, ವಿದೇಶಿ ರಾಷ್ಟ್ರೀಯರ ಬಗ್ಗೆ ಕಾನೂನುಬದ್ಧ ಕ್ರಮ ಕೈಗೊಳ್ಳಬೇಕು. ಮಂಗಲ್‌ದೊಯ್‌ನಲ್ಲಿ ಒಬ್ಬ ಭಾರತೀಯ ಪ್ರಜೆಯೂ ಮತದಾನ ಹಕ್ಕು ಕಳೆದುಕೊಳ್ಳದಿರುವಂತೆ ಸರ್ಕಾರ ನೋಡಿಕೊಳ್ಳಬೇಕು" ಎಂದು ಮೂರು ಪಕ್ಷಗಳೂ ಕರೆಕೊಟ್ಟಿವೆ. ಅಲ್ಲದೆ "ಸರ್ಕಾರೇತರ ಏಜೆನ್ಸಿಗಳು ಕಾನೂನಿನ ವಿಧಾನಗಳಲ್ಲಿ ಮಧ್ಯೆ ಪ್ರವೇಶಿಸದಂತೆ ತಡೆಯಬೇಕು" ಎಂದೂ ಹೇಳಿಕೆ ಒತ್ತಾಯಿಸಿದೆ.

**"ಹೊರಗಿನವರ" ವಿರುದ್ಧ ಚಳುವಳಿ:**

ಈ ಚಳುವಳಿಯು "ಹೊರಗಿನವರ" ವಿರುದ್ಧ ಇದೆ ಎಂದು ಹೇಳಲಾದರೂ, ನಿಜವಾಗಿ ಇದು ಅಸ್ಸಾಮಿಗಳಲ್ಲದವರ ಎಂದರೆ, ಬಂಗ್ಲಾದೇಶೀಯರು ಮತ್ತು ನೇಪಾಳೀಯರ ವಿರುದ್ಧ ಉದ್ದೇಶಿತವಾಗಿದೆ.

ಈ ಪ್ರಚಾರವು ಪರ್ವತರಾಜ್ಯಗಳಾದ ಮಿಜೋರಾಮ್, ಮೇಘಾಲಯ, ಮಣಿಪುರ, ನಾಗಾಲ್ಯಾಂಡ್ ಮತ್ತು ಅರುಣಾಚಲಗಳಲ್ಲೂ ಇದೆ. ಈ ಎಲ್ಲ ರಾಜ್ಯಗಳಲ್ಲಿ ಇದು ಭಾರತೀಯ ವಿರೋಧಿ ಚಳುವಳಿಯ ಸ್ವರೂಪವನ್ನು ಪಡೆಯುತ್ತಿದೆ. ಇತ್ತೀಚೆಗೆ ಈ ಅಂಶಗಳು "ಈಶಾನ್ಯ ಪ್ರದೇಶದ ಅ-ರಾಜಕೀಯ ವಿದ್ಯಾರ್ಥಿಗಳ ಸಭೆ" ಸೇರಿಸಿ, ಈ ಎಲ್ಲ ವಿನಾಶಕಾರಿ ಚಳುವಳಿಗಳೂ ಒಂದು "ಹೊರಗಿನವರನ್ನು ವಿರೋಧಿಸುವ ಹೋರಾಟ"ದ ಸ್ವರೂಪ ಪಡೆಯಬೇಕೆಂದು ಹೇಳಿವೆ.

ಅಮೆರಿಕದ ಏಜೆನ್ಸಿಗಳು ಮತ್ತು ಹಣದ ಬೆಂಬಲ ಪಡೆದಿರುವ ಈ ಚಳುವಳಿಗಳಿಗೆ ಕಾಂಗ್ರೆಸ್ಸಿಗರು, ಅದರಲ್ಲೂ ಇಂದಿರಾಗುಂಪು ಮತ್ತು ಜನತಾಪಕ್ಷದ ಕೆಲವು ಗುಂಪುಗಳ ಬಹಿರಂಗ ಅಥವ ಮುಚ್ಚುಮರೆಯ ಬೆಂಬಲ ಇದೆ. ಈ ರೀತಿಯಲ್ಲಿ ಮಾರ್ಕ್ಸ್‌ವಾದಿಕಮ್ಯುನಿಸ್ಟ್ ಪಕ್ಷದ ಮತ್ತು ಇತರ ಪ್ರಜಾಪ್ರಭುತ್ವವಾದಿ ಶಕ್ತಿಗಳ ಹೆಚ್ಚುತ್ತಿರುವ ಪ್ರಭಾವವನ್ನು ತಡೆಗಟ್ಟಬಹುದೆಂದು ಅವರು ಆಶಿಸಿದ್ದಾರೆ.

350 ಸಂಘಟಕರ ರಹಸ್ಯ ಸಭೆಯಲ್ಲಿ ಬಾಳಾಸಾಹೇಬ್ ದೇವರಸ್ ಭಾಗವಹಿಸಿದ್ದು, ಆರೆಸ್ಸೆಸ್ ಈ ಎಲ್ಲ ಪ್ರಚಾರಗಳ ಹಿಂದೆ ಇದೆ. ಆದರೆ ಆರೆಸ್ಸೆಸ್ ಚಟುವಟಿಕೆಗಳ ಮುಖ್ಯ ಉದ್ದೇಶ ಮುಸ್ಲಿಮ್ ವಿರೋಧಿ ದಂಗೆಗಳನ್ನು ಪ್ರಚೋದಿಸುವುದು. "ಹಿಂದೂ ರಾಷ್ಟ್ರ"ದ ಚಳುವಳಿಯನ್ನು ಈಗ ತೀವ್ರಗೊಳಿಸಲಾಗಿದೆ. ಸ್ವಾತಂತ್ರ್ಯಕ್ಕೆ ಬಹುಕಾಲಕ್ಕೆ ಮುಂಚಿನಿಂದಲೂ ಅಸ್ಸಾಂನಲ್ಲಿ ನೆಲೆಸಿದ್ದ ಸಾವಿರಾರು ಮುಸ್ಲಿಮರಿಗೆ "ಭಾರತ ಬಿಟ್ಟು ಹೊರಡಿ" ಎಂಬ ನೋಟೀಸು ಕೊಡಲಾಗಿದೆ.

ಅಸ್ಸಾಂನಲ್ಲಿ ಇನ್ನೂ ಬಲಪಡೆದಿರದಿದ್ದರೂ ತ್ರಿಪುರಾ ಗಡಿಯ ಕಾಚಾರ್‌ನಲ್ಲಿ ಅಮ್ರುಬಂಗಾಲಿ ಆರೆಸ್ಸೆಸ್ ಸಂಪರ್ಕ ಪಡೆದಿದೆ. ಮಾರ್ಕ್ಸ್‌ವಾದಿ ಪಕ್ಷವು ವಿಧಾನಸಭೆ ಸ್ಥಾನ ಮತ್ತು ಎರಡು ಗ್ರಾಮೀಣ ಪಂಚಾಯತುಗಳನ್ನು ಗೆದ್ದುಕೊಂಡಿರುವ ಲುಂಡಿಂಗ್ ರೈಲ್ವೆ ಕೇಂದ್ರದಲ್ಲಿ, ಈ ಶಕ್ತಿಗಳನ್ನು ಒಂದುಗೂಡಿಸುತ್ತಿರುವ ಆನಂದ ಮಾರ್ಗಿಗಳ ಸಂಖ್ಯೆ ಹೆಚ್ಚುತ್ತಿದೆ.

**ಮಾರ್ಕ್ಸ್‌ವಾದಿ ಕಾರ್ಯಕರ್ತರ ಮೇಲೆ ಹಲ್ಲೆ :**

ವಿನಾಶಕಾರಿ ಶಕ್ತಿಗಳ ಈ ಕಾರ್ಯಗಳಿಂದ, ಹಲ್ಲೆಗಳು, ದೈಹಿಕಹಲ್ಲೆಗಳು ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರ ಕೊಲೆಗಳು ಕೂಡ ನಡೆಯುತ್ತಿವೆ. ಮೇ-ಜೂನ್ ತಿಂಗಳಲ್ಲಿ ಇಬ್ಬರು ಕಾಮ್ರೇಡುಗಳು ಕೊಲೆಯಾಗಿದ್ದಾರೆ. ಮೇ ತಿಂಗಳಲ್ಲಿ ಸೆಪಕಾಟಿಯಲ್ಲಿ ಎಸ್. ಎಫ್. ಐ. ನಾಯಕನನ್ನು ಕೊಲೆ ಮಾಡುವ ಉದ್ದೇಶದಿಂದ ಚೂಪು ಆಯುಧದಿಂದ ಹಲ್ಲೆ ನಡೆಸಲಾಯಿತು. ಬಾರ್ಪೇಟದಲ್ಲಿ ಈ ಮತಾಂಧ ಶಕ್ತಿಗಳು ಜೂನ್‌ನಲ್ಲಿ ನಡೆದ 5000 ಜನರ ಸಭೆಯ ಮೇಲೆ ಹಲ್ಲೆ ನಡೆಸಿ, ಮಾರ್ಕ್ಸ್‌ವಾದಿ ಪಕ್ಷದ ರಾಜ್ಯಸಮಿತಿಯ ನಾಯಕರೊಬ್ಬರನ್ನು ಕೊಲ್ಲುವ ಯತ್ನ ನಡೆಸಿದರು. ರಾಸಾಯನಿಕ ಗೊಬ್ಬರ ಕಾರ್ಖಾನೆಯ ಟ್ರೇಡ್‌ಯೂನಿಯನ್ ನಾಯಕರಿಗೆ ಕೊಲೆ ಬೆದರಿಕೆಯ ಪತ್ರಗಳು ಬರುತ್ತಿವೆ. ಇಲ್ಲಿ ಕೆಲವೇ ತಿಂಗಳುಗಳ ಹಿಂದೆ ಒಬ್ಬ ಕಾಮ್ರೇಡ್ ಕೊಲೆಗೀಡಾದರು. ಪಕ್ಕದ ಆಯಿಲ್ ಟೌನ್‌ನಲ್ಲಿ (ಎಣ್ಣೆ ನಗರದಲ್ಲಿ), ಪ್ರಜಾಪ್ರಭುತ್ವವಾದಿ ಯುವ ಮೇಳದ ಜಿಲ್ಲಾ ಸಮಿತಿಯ ಜೀವ ತೆಗೆಯುವ ಯತ್ನ ನಡೆಸಲಾಯಿತು. ಪಕ್ಷದ ಮತ್ತು ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರ ಮೇಲಿನ ಹಲ್ಲೆಗಳು ವಿಪರೀತವಾಗುತ್ತಿವೆ.

ಪ್ರಜಾಸತ್ತಾತ್ಮಕ ಶಕ್ತಿಗಳ ಪ್ರಗತಿಯನ್ನು ಮುರಿಯಲು ಇಂಥ ಪ್ರತಿಗಾಮಿ ಶಕ್ತಿಗಳು ಯತ್ನಿಸುತ್ತಿದ್ದರೆ, ಜನತಾ ಪಕ್ಷ ಮತ್ತದರ ಸರ್ಕಾರಗಳು ಇದು ತಮಗೆ ಸಂಬಂಧಿಸಿದುದೇ ಅಲ್ಲವೆನ್ನುವ ಹಾಗೆ ವರ್ತಿಸುತ್ತಿವೆ. ಆ ಪಕ್ಷದ ಕೆಲವು ಗುಂಪುಗಳು, ಅದರಲ್ಲೂ ಆರೆಸ್ಸೆಸ್-ಜನಸಂಘ ಈ ಜಾತ್ಯತೀತತೆ ಮತ್ತು ಪ್ರಜಾಪ್ರಭುತ್ವ ವಿರೋಧಿ ಚಟುವಟಿಕೆಗಳಲ್ಲಿ ನೇರವಾಗಿ ಭಾಗವಹಿಸಿವೆ. ●

# ಎಚ್ಚರಿಕೆಗಳ ಅಲಕ್ಷ್ಯ

1977ರ ಮಾರ್ಚಿ 24 ರಂದು ಜನತಾಪಕ್ಷದ ಸರ್ಕಾರ ಕೇಂದ್ರದಲ್ಲಿ ಅಧಿಕಾರ ವಹಿಸಿಕೊಂಡಿತು. 1977ರ ಮಾರ್ಚಿ 26-27 ರಂದು ನವದೆಹಲಿಯಲ್ಲಿ ಸಭೆ ಸೇರಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು, ಇಂದಿರಾಗಾಂಧಿ ಕಾಂಗ್ರೆಸ್ ಮತ್ತು ತುರ್ತು ಆಳ್ವಿಕೆಯನ್ನು ಸೋಲಿಸಿದ ಈ ಚಾರಿತ್ರಿಕ ಚುನಾವಣಾ ವಿಜಯವನ್ನು ಪ್ರಶಂಸಿಸಿತು. ಜನತಾಪಕ್ಷ ಮತ್ತು ಕಾಂಗ್ರೆಸ್ ಫಾರ್ ಡೆಮಾಕ್ರಸಿಗಳನ್ನು ಅಭಿನಂದಿಸುತ್ತಾ, ಕೇಂದ್ರ ಸಮಿತಿಯು "ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ಪುನರ್‌ಸ್ಥಾಪನೆಗೆ, ಅಧಿಕಾರಶಾಹಿ ನೀತಿಗಳು ಮಾಡಿದ ಕೆಡುಕನ್ನು ನಿವಾರಿಸುವುದಕ್ಕೆ ಮತ್ತು ಜನತೆಗೆ ಸಮಾಧಾನ ಕೊಡುವುದಕ್ಕೆ ಬೆಂಬಲ ನೀಡುತ್ತೇವೆ" ಎಂದು ಭರವಸೆ ಕೊಟ್ಟಿತು.

"ಪ್ರಜಾಸತ್ತಾತ್ಮಕ ಚಳುವಳಿಯ ಹಿತಾಸಕ್ತಿಯಿಂದ ಅಗತ್ಯವೆನಿಸಿದಾಗ, ಜನತಾ-ಸಿ.ಎಫ್.ಡಿ ಸರ್ಕಾರದ ಕ್ರಮಗಳನ್ನು ಟೀಕಿಸುವ ಹಕ್ಕನ್ನೂ ನಮ್ಮ ಪಕ್ಷ ಕಾದಿರಿಸಿಕೊಳ್ಳುತ್ತದೆ" ಎಂದೂ ಕೇಂದ್ರಸಮಿತಿ ಹೇಳಿತ್ತು.

"ಸರ್ಕಾರದ ಮತ್ತು ತಾವು ಚುನಾಯಿಸಿದ ಪ್ರತಿನಿಧಿಗಳ ಕಾರ್ಯನಿರ್ವಹಣೆಯ ಬಗ್ಗೆ ಜನರು ನಿರಂತರ ಎಚ್ಚರಿಕೆ ವಹಿಸುವುದು ಅಗತ್ಯ, ಅದಿಲ್ಲದಿದ್ದರೆ ಪ್ರಜಾಪ್ರಭುತ್ವವನ್ನು ರೂಪಿಸಿ ಬಲಪಡಿಸುವುದರಲ್ಲಿ ಜನಾಭಿಪ್ರಾಯದ ಸಂಪೂರ್ಣ ಪ್ರಭಾವ ಗೊತ್ತಾಗುವುದಿಲ್ಲ" ಎಂದು ಕೇಂದ್ರಸಮಿತಿ ಒತ್ತಿ ಹೇಳಿತ್ತು.

ಹೊಸ ಸರ್ಕಾರದ ರಚನೆಯ ಸುಮಾರು ಒಂದು ತಿಂಗಳ ನಂತರ, ಏಪ್ರಿಲ್ 28-29 ರಂದು ಕೇಂದ್ರಸಮಿತಿ ಪುನಃ ಸಭೆ ಸೇರಿತ್ತು. ನಾಗರಿಕ ಮತ್ತು ಜನಸತ್ತಾತ್ಮಕ ಹಕ್ಕುಗಳ ಬಹುಪಾಲು ಪುನರ್‌ಸ್ಥಾಪನೆಯನ್ನು ಕೇಂದ್ರ ಸಮಿತಿ ಸ್ವಾಗತಿಸಿತು. ಆದರೆ "ಈ ಕ್ರಮವನ್ನು ಪೂರ್ಣಗೊಳಿಸುವುದರಲ್ಲಿ 'ಕಾಣಬರುತ್ತಿರುವ ಹಿಂಜರಿಕೆಯನ್ನು ವಿಷಾದದಿಂದ ಗಮನಿಸುತ್ತದೆ. ಸಂಸತ್ತಿನ ಉಭಯಸದನಗಳ ಜಂಟಿ ಅಧಿವೇಶನವನ್ನು ರಾಷ್ಟ್ರಪತಿಯವರು ಉದ್ದೇಶಿಸಿ ಭಾಷಣಮಾಡಿದಾಗ ಕೇಂದ್ರಸಮಿತಿಯು ಸರ್ಕಾರದ ಪರವಾಗಿ ನೀಡಿದ ಮೊದಲ ಹೇಳಿಕೆಯಾಗಿತ್ತು. ಅದರಲ್ಲಿ ಮೀಸಾ ರದ್ದಿನ ಬಗ್ಗೆ ಮತ್ತು ಎಲ್ಲ ರಾಜಕೀಯ ಕೈದಿಗಳಿಗೆ ಕ್ಷಮಾದಾನ ನೀಡುವುದರ ಬಗ್ಗೆ ಯಾವ ಘೋಷಣೆಯೂ ಇರದೆ ಇದ್ದದ್ದು ವಿಷಾದನೀಯ" ಎಂದು ಕೇಂದ್ರಸಮಿತಿ ಅಭಿಪ್ರಾಯಪಟ್ಟಿತು.

"ಬೋನಸ್, ಕಡ್ಡಾಯ ಠೇವಣಿ, ಇವುಗಳ ಬಗ್ಗೆ ಕಾರ್ಮಿಕವರ್ಗಕ್ಕೆ ನೀಡಿದ್ದ ವಚನಗಳ ಪೂರೈಕೆಯಲ್ಲಿ ವಿಫಲಗೊಂಡಿರುವುದರ ಬಗ್ಗೆಯೂ ಕೇಂದ್ರ ಸಮಿತಿ ಕಾಳಜಿ ವ್ಯಕ್ತಪಡಿಸುತ್ತದೆ" ಎಂದೂ ಹೇಳಲಾಗಿತ್ತು.

"ಆರ್ಥಿಕ ಪರಿಸ್ಥಿತಿಯ ಬಗ್ಗೆ, ಅದರಲ್ಲೂ ಬೆಲೆಏರಿಕೆ ಮತ್ತು ಅಗಾಧ ನಿರುದ್ಯೋಗಗಳ ಬಗ್ಗೆ ಸರ್ಕಾರಿ ವಕ್ತಾರರು ಮಾತನಾಡಿದರೂ ಈ ಯಾವುದೇ ಸಮಸ್ಯೆಗಳ ನಿವಾರಣೆಗೆ ಯಾವ ಕ್ರಮಗಳನ್ನೂ ಘೋಷಿಸಿಲ್ಲ. ಏಕಸ್ವಾಮ್ಯಗಾರರ ಮತ್ತು ಭೂಮಾಲೀಕರ ಲಾಭಕೋರತನವನ್ನು ತಡೆಗಟ್ಟದಿದ್ದರೆ ಯಾವ ಪರಿಹಾರವನ್ನೂ ಜನತೆಗೆ ನೀಡಲು ಸಾಧ್ಯವಿಲ್ಲ. ಅಲ್ಲದೆ ಬಹುದೇಶಿ ಕಂಪೆನಿಗಳ ಆಕ್ರಮಣ ಮತ್ತು ವಿದೇಶಿ ನೆರವಿನ ಅವಲಂಬನೆಗಳು ಆರ್ಥಿಕತೆಯ ಬಿಕ್ಕಟ್ಟನ್ನು ಹೆಚ್ಚಿಸುತ್ತಿವೆ. ಇವನ್ನು ಕೊನೆಗೊಳಿಸಬೇಕು.

"ಇವೆಲ್ಲವನ್ನೂ ಮಾಡದೆ, ಈಗ ಆರ್ಥಿಕ ಕ್ಷೇತ್ರದಲ್ಲಿ ಘೋಷಿಸಲಾಗಿರುವ ನೀತಿಗಳು ಭಾರತೀಯ ಮತ್ತು ವಿದೇಶಿ ದುಷ್ಟಶಕ್ತಿಗಳಿಗೆ ಸಹಾಯ ಮಾಡುವಂತೆ ಇವೆ."

ಕೇಂದ್ರಸಮಿತಿಯು ಈ ಹೇಳಿಕೆಯಲ್ಲೇ, ಯಾವುದೇ ಬಗೆಯ ನಿರಾತಂಕ ಧೋರಣೆಯ ಬಗ್ಗೆ ಎಚ್ಚರಿಕೆ ಕೊಟ್ಟಿತ್ತು:

"ಜನತಾ ಅಲೆ ಎಂದು ಬಂದಿರುವುದು ಜನತಾಪಕ್ಷಕ್ಕೆ ನೀಡುವ ಬೆಂಬಲ ಎಂಬ ತಪ್ಪು ನಂಬಿಕೆಯಿಂದ ಮೂಡಿಬರುವ ನಿರಾತಂಕ ಧೋರಣೆಯು ಪ್ರಜಾಪ್ರಭುತ್ವವಾದಿ ಐಕ್ಯತೆಯನ್ನು ಹಾಳುಮಾಡುತ್ತದೆ. ಎಲ್ಲ ಸರ್ವಾಧಿಕಾರವಿರೋಧಿ ಶಕ್ತಿಗಳ ಐಕ್ಯತೆಯಿಂದ ಜನತೆ ಹಿಂದೆಂದೂ ಇಲ್ಲದಷ್ಟು ರಾಜಕೀಯ ಚಟುವಟಿಕೆ ತೋರಿಸಿದರು. ಈ ಶಕ್ತಿಗಳಲ್ಲಿ ಜನತಾಪಕ್ಷ ಬಲವಾಗಿದ್ದರೂ, ಸಿ.ಎಫ್.ಡಿ. ಅಲ್ಪಸಂಖ್ಯಾತ ಕೋಮುಗಳು, ಮಾರ್ಕ್ಸ್‌ವಾದಿ ಪಕ್ಷ ಮತ್ತು ಅದರ ಮಿತ್ರರು, ಅಕಾಲಿಗಳು, ಇವರೆಲ್ಲರೂ ತಮ್ಮದೇ ವಿಶೇಷ ಕಾಣಿಕೆಯನ್ನು ಕೊಟ್ಟಿದ್ದಾರೆ. ಜನತಾಪಕ್ಷದ ನಾಯಕರು ಇವೆಲ್ಲದರ ಬಗ್ಗೆ ಕಣ್ಣುಮುಚ್ಚಿ, ಸ್ವಾತಂತ್ರ್ಯಾನಂತರ ಕಾಂಗ್ರೆಸ್‌ಪಕ್ಷ ಮೂವತ್ತು ವರ್ಷಗಳು ಪಡೆದಿದ್ದ ಅಧಿಕಾರವನ್ನು ಪಡೆಯಲು ತಾವು ಬಂದಿದ್ದೇವೆ ಎಂದು ಭಾವಿಸಿದರೆ ಅವರಿಗೇ ಮುಳುವಾಗುತ್ತದೆ."

"ಇಂಥ ವಾಸ್ತವ ಧೋರಣೆಯನ್ನು ತಳೆಯುವುದನ್ನು ಬಿಟ್ಟು, ಆಳುವ ಜನತಾ ಪಕ್ಷದ ಕೆಲವು ಅಂಶಗಳು ಅಪಾಯಕಾರಿಯಾದ, ಪ್ರಜಾಪ್ರಭುತ್ವ ವಿರೋಧಿಯಾದ ಕಮ್ಯುನಿಸ್ಟ್ ವಿರೋಧಿ ಧೋರಣೆಯನ್ನು ತಳೆಯುತ್ತಿದ್ದಾರೆ."

1977ರ ಏಪ್ರಿಲ್‌ನ ಈ ಹೇಳಿಕೆಯೇ ಆರೆಸ್ಸೆಸ್ ಪ್ರಶ್ನೆಯನ್ನೂ ಎತ್ತಿತ್ತು: "ಆರೆಸ್ಸೆಸ್ ಚಟುವಟಿಕೆಗಳ ಪುನಶ್ಚೇತನವೂ ಅಪಾಯಕಾರಿ... ಜನತಾ ಪಕ್ಷದ ನಾಯಕರು, ಅದರಲ್ಲೂ ಆರೆಸ್ಸೆಸ್‌ನೊಡನೆ ತಮ್ಮ ಹಿಂದಿನ ಸಂಬಂಧವನ್ನು ಕಳಚಿಕೊಳ್ಳಬೇಕಾಗಿರುವವರು, ಆರೆಸ್ಸೆಸ್ ಪುನಶ್ಚೇತನದ ಅಪಾಯವನ್ನು ಅರಿತುಕೊಳ್ಳುವರೆಂದು ಕೇಂದ್ರ ಸಮಿತಿ ಆಶಿಸುತ್ತದೆ."

ಜೂನ್ 2-3ರ ರಾತ್ರಿಯಲ್ಲಿ ಮಧ್ಯಪ್ರದೇಶದ ದಿಲ್ಲಿ-ರಾಜಹಾರ ಗಣಿಗಳ ಎಂಟು ಕಾರ್ಮಿಕರು ಪೋಲೀಸ್ ಗುಂಡಿನಿಂದ ಸತ್ತರು. ಜೂನ್ 4ರ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ಹೇಳಿಕೆಯು ಹೀಗೆ ಹೇಳಿತ್ತು:

"ಪ್ರಧಾನ ಮಂತ್ರಿಗಳೂ ಸೇರಿದಂತೆ ಕೆಲವು ಜನತಾ ಸರ್ಕಾರದ ವಕ್ತಾರರು ಪದೇ ಪದೇ ಹೇಳಿರುವ, ಗೆರಾವೋಗಳು, ಮುಷ್ಕರಗಳು ಮತ್ತು ದಂಗೆಗಳನ್ನು ಸಹಿಸುವುದಿಲ್ಲ ಎಂಬ ಹೇಳಿಕೆಗಳು, ಗುಂಡೇಟು ಪ್ರಿಯರಾದ ಪೋಲೀಸರಿಗೆ ದಿಲ್ಲಿ-ರಾಜಹಾರದಲ್ಲಿ ನಡೆದಂಥ ಭೀಕರ ಅಪರಾಧಗಳನ್ನು ನಡೆಸಲು ಪ್ರೋತ್ಸಾಹ ಕೊಡುತ್ತಿದೆ."

"ದಿಲ್ಲಿ-ರಾಜಹಾರದಲ್ಲಿ ನಡೆದಂಥ ಪೋಲೀಸ್ ಘಟನೆಗಳು ಮತ್ತೆ ನಡೆದರೆ ಕಾರ್ಮಿಕವರ್ಗವು ದೇಶದ ಹೊಸ ಆಡಳಿತಗಾರರಿಂದ ದೂರವಾಗುವ ಸಂಭವವಿದೆ" ಎಂದು ಪೊಲಿಟ್‌ಬ್ಯೂರೋ ಎಚ್ಚರಿಸಿತ್ತು.

ಒಂಬತ್ತು ರಾಜ್ಯಗಳ ವಿಧಾನಸಭೆಗಳಿಗೆ ಚುನಾವಣೆ ನಡೆದ ನಂತರ ಜೂನ್ 22-23 ರಂದು ಕೇಂದ್ರಸಮಿತಿ ಸಭೆ ಸೇರಿತ್ತು. ಚುನಾವಣಾ ಫಲಿತಾಂಶಗಳನ್ನು ಪರಿಶೀಲಿಸುತ್ತಾ ಅದು ಹೀಗೆ ಹೇಳಿತ್ತು:

"ಜನತಾ ಪಕ್ಷದೊಳಗೆ ನುಸುಳಿಕೊಂಡಿರುವ ಪಟ್ಟಭದ್ರ ಹಿತಾಸಕ್ತಿಗಳು ಹರಿಜನರ ಬಗ್ಗೆ ತಮಗಿರುವ ಬಹಿರಂಗ ಆಕ್ರೋಶದಿಂದ, ಅನೇಕ ರಾಜ್ಯಗಳಲ್ಲಿ ಹರಿಜನರು ಕಾಂಗ್ರೆಸ್ಸಿಗೆ ಮತನೀಡುವಂತೆ ಮಾಡಿದ್ದಾರೆ. ತುಳಿತಕ್ಕೊಳಗಾದ ವರ್ಗದ ಬಹುಪಾಲು ಜನರು ಕಾಂಗ್ರೆಸ್ಸಿನ ಜೊತೆಗಿರುವುದು, ಗ್ರಾಮೀಣ ದುಷ್ಟಶಕ್ತಿಗಳ ಜೊತೆಗಿನ ವೈತ್ರಿಯ ಬಗ್ಗೆ ಎಚ್ಚರಿಕೆಯನ್ನು ಕೊಡುತ್ತದೆ."

"ಕಾಂಗ್ರೆಸ್ ಸರ್ಕಾರ ವಿಸರ್ಜನೆಯಾದ ನಂತರ ಬಿಹಾರದಲ್ಲಿ ಹರಿಜನರ ಮೇಲೆ ನಡೆದ ಹಲ್ಲೆಗಳು ಜನರಿಗೆ ಭಯವನ್ನುಂಟುಮಾಡಿದೆ. ಜನತಾ ಪಕ್ಷದ ನಾಯಕರು ಮುಸ್ಲಿಮ್ ಅಲ್ಪಸಂಖ್ಯಾಂತರ ಬಗ್ಗೆ ಸುಮ್ಮನಿರುತ್ತಾರೆ...".

"ಇವೆಲ್ಲವೂ ಒಬ್ಬ ಶತ್ರುವಿನ ವಿರುದ್ಧ ಹೋರಾಟದಲ್ಲಿ, ಎಂದರೆ ಉಗ್ರ ಪ್ರತಿಗಾಮಿ ಮತ್ತು ಏಕಪಕ್ಷ ಸರ್ವಾಧಿಕಾರಿ ಶಕ್ತಿಗಳ ವಿರುದ್ಧದ ಹೋರಾಟದಲ್ಲಿ ತೊಡಕನ್ನುಂಟುಮಾಡುವ ಅಪಾಯಕಾರಿ ಧೋರಣೆಗಳು."

"ಸರ್ವಾಧಿಕಾರ ಪ್ರತಿಗಾಮಿತನವನ್ನು ವಿರೋಧಿಸುವ ಎಲ್ಲ ಶಕ್ತಿಗಳನ್ನು ಒಗ್ಗೂಡಿಸುವ ಧ್ಯೇಯವನ್ನು ಜನತಾ ಪಕ್ಷದ ನಾಯಕರಲ್ಲಿ ಅನೇಕರು ಅಲಕ್ಷಿಸುವಂತೆ ಕಾಣುತ್ತದೆ. ಅವರೆಲ್ಲ ಗುಂಪು ಹಿತಾಸಕ್ತಿಗಳನ್ನು ಹೊಂದಿದ್ದಾರೆ. ತಮ್ಮ ಅಧಿಕಾರದ ಗುತ್ತೇದಾರಿಯನ್ನು ಸ್ಥಾಪಿಸುವುದರಲ್ಲಿ ಆಸಕ್ತರಾಗಿದ್ದಾರೆ."

ಈ ಪರಿಸ್ಥಿತಿಯನ್ನು ನಿವಾರಿಸಲು, ಕಾಂಗ್ರೆಸ್‌ನೊಡನೆ ರಾಜಿಮಾಡಿಕೊಳ್ಳುವುದನ್ನು ನಿಲ್ಲಿಸಲು, ಮತ್ತು ಅಧಿಕಾರ ಏಕಸ್ವಾಮ್ಯ ಪ್ರಯತ್ನವನ್ನು ನಿಲ್ಲಿಸಲು ಜನತಾಪಕ್ಷ ಮತ್ತು ಅದರೊಳಗಿನ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಕರೆ ನೀಡಿದನಂತರ, ಕೇಂದ್ರ ಸಮಿತಿಯು ಹೀಗೆ ಹೇಳಿದೆ:

"ಜನತಾಪಕ್ಷವು ತನ್ನೊಳಗೇ ಎದುರಿಸುತ್ತಿರುವ ಅಪಾಯ ಇದು. ಏಕೆಂದರೆ ಅದರ ಅನೇಕ ನಾಯಕರು, ದುಷ್ಟ ಹಿತಾಸಕ್ತಿಗಳಿಂದ ಸ್ವಾಗತಿಸಲ್ಪಡುವ ಸಾಂಪ್ರದಾಯಿಕ ಮತ್ತು ಸ್ಥಾನಪ್ರತಿಷ್ಠೆಯ ಅಭಿಪ್ರಾಯಗಳಿಗೆ ಹೆಸರಾಗಿದ್ದಾರೆ."

ಅಲ್ಲದೆ "ಕಾನೂನು ಪುಸ್ತಕದಲ್ಲಿ ಮೀಸಾ ಇನ್ನೂ ಮುಂದುವರೆಯುತ್ತಿರುವುದು ಚಕಿತಗೊಳಿಸುತ್ತದೆ."

"ಸರ್ವಾಧಿಕಾರಿ ಶಕ್ತಿಗಳು ಮತ್ತು ಕ್ರಮಗಳನ್ನು ವಿರೋಧಿಸುವ ಹೋರಾಟದ ಈ ನಿಲುಗಡೆಯು, ಜನರ ಮನಸ್ಸಿನಲ್ಲಿ ತಪ್ಪು ಅಭಿಪ್ರಾಯಗಳಿಗೆ ಎಡೆ ಮಾಡುತ್ತಿದೆ."

ಜನತಾ ಸರ್ಕಾರದ ಆರ್ಥಿಕ ನೀತಿಗಳ ಬಗ್ಗೆ ಕೇಂದ್ರ ಸಮಿತಿ ಹೇಳಿಕೆ ಈ ರೀತಿ ಇದೆ:

"ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳು ಜನತೆಯ ಕೋಪವನ್ನು ಕೆರಳಿಸುತ್ತಿವೆ...ಕೈಗಾರಿಕೆ ಮತ್ತು ಕೃಷಿ ಕೆಲಸಗಾರರ ಹಿತಾಸಕ್ತಿಗಳನ್ನು ಕಾಪಾಡಲು ಆರ್ಥಿಕ ನೀತಿಗಳನ್ನು ಅನುಸರಿಸಲಾಗುವುದೆಂದು ಜನತಾಪಕ್ಷದ ಚುನಾವಣಾ ಪ್ರಣಾಳಿಕೆ ಹೇಳುತ್ತದೆ. ಆದರೆ ಈಗ ಅನುಸರಿಸಲಾಗುತ್ತಿರುವ ನೀತಿಗಳು ಆ ಭರವಸೆಯ ಬಹಿರಂಗ ಉಲ್ಲಂಘನೆಯಾಗಿವೆ."

ಬೆಲೆಗಳ ನಿಯಂತ್ರಣದಲ್ಲಿ ಸರ್ಕಾರದ ಅಸಮರ್ಥತೆಯ ಬಗ್ಗೆ ಹೇಳಿಕೆ ಹೇಳುತ್ತದೆ: "ದೊಡ್ಡ ವ್ಯಾಪಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲು, ಸಗಟು ವ್ಯಾಪಾರವನ್ನು ತಾನೇ ವಹಿಸಿಕೊಳ್ಳಲು, ಅಗತ್ಯ ವಸ್ತುಗಳ ದಾಸ್ತಾನಿನ ಉಸ್ತುವಾರಿ ನಡೆಸಲು ಮತ್ತು ಅದರ ಆಧಾರದ ಮೇಲೆ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ರೂಪಿಸಲು ಸರ್ಕಾರ ಮನಸ್ಸು ಮಾಡದಿರುವುದನ್ನು ಜನತೆ ಗಮನಿಸಿದ್ದಾರೆ."

"ಖಾಸಗಿ ಸಗಟು ವ್ಯಾಪಾರ ಮತ್ತು ಬಂಡವಾಳಗಳ ಬಗ್ಗೆ ಜನತಾ ಸರ್ಕಾರಕ್ಕಿರುವ ನಂಬಿಕೆಯು, ಜನತೆಯಲ್ಲಿರುವ ಒಳ್ಳೆಯ ಮನೋಭಾವವನ್ನು ಕೆಡಿಸುತ್ತದೆ ಎಂದು ನಮ್ಮ ಪಕ್ಷ ಎಚ್ಚರಿಸುತ್ತದೆ."

"ಶ್ರೀ ಪಟೇಲರ ಬಜೆಟ್ ಎಲ್ಲ ಕಡೆಯಿಂದ ಟೀಕೆಗೊಳಗಾಗಿದೆ...ಜನತೆಯ ವೆಚ್ಚದಲ್ಲಿ ಖಾಸಗಿ ಬಂಡವಾಳವನ್ನು ಸಂತೃಪ್ತಿಗೊಳಿಸುವ ಕಾಂಗ್ರೆಸ್ ನೀತಿಯನ್ನು ಅದು ಅನುಸರಿಸಿರುವುದೇ ಅಲ್ಲದೆ, ವಿದೇಶಿ ಸಾಲಗಳು ಮತ್ತು ನೆರವನ್ನು ಹೆಚ್ಚಾಗಿ ಅವಲಂಬಿಸಿದೆ."

ಕೇಂದ್ರ ಸಮಿತಿಯು ಜನತೆಗೆ ಎಚ್ಚರಿಕೆ ನೀಡಿದೆ- "ಚುನಾವಣಾ ವಿಜಯವು ಅದ್ಭುತವಾಗಿದ್ದರೂ ನಿಶ್ಚಿಂತೆಯಿಂದ ಕೂರುವುದಕ್ಕೆ ಯಾವ ಕಾರಣವೂ ಇಲ್ಲ. ಅವರ ವಿಜಯಗಳ ಫಲಗಳನ್ನು ಕಸಿದುಕೊಳ್ಳಲು ಹೊಸ ಶಕ್ತಿಗಳು ಮತ್ತು ಧೋರಣೆಗಳು ಮೇಲೇಳುತ್ತಿವೆ. ಅಪಾಯಕಾರಿ ನೀತಿಗಳಿಂದ ಹೊಸ ಬದಲಾವಣೆಗಳು ಆಗುತ್ತಿವೆ.

ಸಂವಿಧಾನದ 42ನೇ ತಿದ್ದುಪಡಿ ಮಸೂದೆಯ ವಾಪಸಾತಿಯನ್ನು ಹಿಂದಕ್ಕೆ ತಳ್ಳಿ ಮೀಸಾ ಅನ್ನು ಉಳಿಸಿಕೊಂಡದ್ದರ ಬಗ್ಗೆ 1977ರ ಆಗಸ್ಟ 13ರಂದು ಪೊಲಿಟ್‌ಬ್ಯೂರೋ ಹೀಗೆ ಹೇಳಿದೆ- "ಸರ್ವಾಧಿಕಾರದ ವಿರುದ್ಧ ಹೋರಾಡಿ ಅದರ ಪರಿಣಾಮಗಳನ್ನು ನಿರ್ಮೂಲ ಮಾಡುವುದರಲ್ಲಿ ಮೊದಲು ಇದ್ದ ಉತ್ಸಾಹ ಮತ್ತು ವೇಗ ಈಗ ಕಳೆದುಹೋಗಿದೆ."

ಬೆಲೆ ನಿಯಂತ್ರಣದಲ್ಲಿ ಕ್ರಮಕೈಗೊಳ್ಳಲು ಸರ್ಕಾರ ವಿಫಲವಾದದ್ದರ ಬಗ್ಗೆ ತನ್ನ ಕಾಳಜಿಯನ್ನು ವ್ಯಕ್ತಪಡಿಸುತ್ತಾ ಪೊಲಿಟ್‌ಬ್ಯೂರೋ, ಕೆಲವು ಅಗತ್ಯ ವಸ್ತುಗಳ ಸಗಟು ವ್ಯಾಪಾರದ ರಾಷ್ಟ್ರೀಕರಣ ಆಗದಿದ್ದರೆ "ಹಣದುಬ್ಬರದ ಸಂದರ್ಭದಲ್ಲಿ ಮತ್ತು ಕೆಲವು ಸರಬರಾಜಿನ ಕೊರತೆಯಿರುವಾಗ ಬೆಲೆ ನಿಯಂತ್ರಣದ ಬಗ್ಗೆ ಯೋಚಿಸಲೂ ಸಾಧ್ಯವಿಲ್ಲ. . ಆದರೆ ಜನತಾಸರ್ಕಾರ ಈ ಅಗತ್ಯ ಕ್ರಮವನ್ನು ಕೈಗೊಳ್ಳದೆ ಇರುವುದರಿಂದ ಅದರ ಬೆಲೆ ನಿಯಂತ್ರಣ ಕ್ರಮಗಳು ಪರಿಣಾಮಕಾರಿಯಾಗುವುದಿಲ್ಲ".

ಬೋನಸ್ ಬಗ್ಗೆ ಸರ್ಕಾರ ತನ್ನ ನಿರ್ಧಾರವನ್ನು ಪ್ರಕಟಿಸುವುದರಲ್ಲಿ ವಿಳಂಬ ಮಾಡುತ್ತಿರುವುದರ ಬಗೆ ಕೈಗಾರಿಕಾವಲಯಗಳಲ್ಲಿ ಅಸಮಾಧಾನ ಬೆಳೆಯುತ್ತಿದೆ ಎಂದು ಪೊಲಿಟ್‌ಬ್ಯೂರೋ ಸೂಚಿಸಿದೆ. ಹರಿಜನರ ಮೇಲೆ ಅತ್ಯಾಚಾರಗಳು ನಡೆಯುತ್ತಿರುವುದನ್ನು ಖಂಡಿಸಿ, ಹೊಸಸರ್ಕಾರದಿಂದ ತಮಗೆ ನ್ಯಾಯದೊರೆಯಬಹುದೆಂದು ತಿಳಿದಿದ್ದ ಮುಸ್ಲಿಮ್ ಅಲ್ಪಸಂಖ್ಯಾತರ ನಂಬಿಕೆ ಕುಸಿಯುತ್ತಿದೆ ಎಂದೂ ಹೇಳಿದೆ.

ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯಾತೀತ ದೃಷ್ಟಿಕೋನ ಸ್ವಾತಂತ್ರ್ಯಗಳಿಗೆ ಹೊಂದಿಕೊಳ್ಳದ ಕೆಲವು ಸಾಂಪ್ರದಾಯಿಕ ಆಲೋಚನೆಗಳನ್ನು ಆಡಳಿತ ಪಕ್ಷದೊಳಗಿನ ಕೆಲವು ಅಂಶಗಳು ಹರಡುತ್ತಿವೆ. ಸುಪ್ರಸಿದ್ಧ ಇತಿಹಾಸ ಪುಸ್ತಕಗಳ ಬಗ್ಗೆ ಎದ್ದವಿವಾದವು, ಕಮ್ಯುನಿಸಂ ಬಗ್ಗೆ ಬಹಿರಂಗ ದ್ವೇಷ

ತೋರಿಸುವ ಈ ಪ್ರತಿಗಾಮಿ ದೃಷ್ಟಿಕೋನದ ಫಲವೇ ಆಗಿದೆ...ಪ್ರಜಾಪ್ರಭುತ್ವವನ್ನು ಉಳಿಸುವ ಒಂದು ಕಾರ್ಯಕ್ರಮಕ್ಕೆ ಜನತಾಸರ್ಕಾರವನ್ನು ಚುನಾಯಿಸಲಾಗಿದೆ. ಆಲೋಚನೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಅಡ್ಡಿಪಡಿಸುವ ಯಾವ ಕ್ರಮವನ್ನೂ ಅದು ತೆಗೆದುಕೊಳ್ಳಬಾರದು" ಎಂದು ಪೊಲಿಟ್‌ಬ್ಯೂರೋ ತನ್ನ ಹೇಳಿಕೆಯನ್ನು ಮುಗಿಸಿದೆ.

42ನೇ ಸಂವಿಧಾನ ತಿದ್ದುಪಡಿಯನ್ನು ಪೂರ್ತಿ ಕೈಬಿಡದೆ, ಆ ಮಸೂದೆಯ ಕೆಲವು ಅಂಶಗಳನ್ನು ತಿದ್ದಲು ಮಾತ್ರ ಜನತಾ ಸರ್ಕಾರ ಯೋಚಿಸುತ್ತಿದೆಯೆಂದು ತಿಳಿದುಬಂದಾಗ, 1977ರ ಸೆಪ್ಟೆಂಬರ್ 16ರಂದು ಪೊಲಿಟ್‌ಬ್ಯೂರೋ ಒಂದು ಹೇಳಿಕೆ ಕೊಟ್ಟಿತು. ಅದರಲ್ಲಿ, "ಮಸೂದೆಯನ್ನು ರಾಜ್ಯಸಭೆಯಲ್ಲಿ ಪಾಸುಮಾಡಬೇಕು ಎಂಬ ನೆಪದಲ್ಲಿ ಕಾಂಗ್ರೆಸ್‌ಪಕ್ಷ ಯಾವುದನ್ನು ಒಪ್ಪಿಕೊಳ್ಳುತ್ತದೋ ಅದನ್ನು ಮಾತ್ರ ಮಸೂದೆಯಲ್ಲಿ ಸೇರಿಸುವ" ಸೂಚನೆಗಳಿವೆ ಎನ್ನಲಾಗಿತ್ತು.

"ಇಡೀ 42ನೇ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಕೈಬಿಡಲಾಗುವುದು ಎಂದು ಜನತೆಗೆ ವಚನವಿತ್ತು ಅಧಿಕಾರಕ್ಕೆ ಬಂದಿರುವ ಜನತಾಪಕ್ಷದ ಸರ್ಕಾರವು ತನ್ನ ಪ್ರತಿಜ್ಞೆಯನ್ನು ಈಡೇರಿಸಿ ಆ ಮಸೂದೆಯನ್ನು ಬೇರು ಸಹಿತ ಕಿತ್ತುಹಾಕುವಂತೆ ಮನವಿ ಮಾಡಬೇಕು. ರಾಜ್ಯಸಭೆಯಲ್ಲಿ ಇದನ್ನು ಮಾಡಲು ಕಾಂಗ್ರೆಸ್‌ಪಕ್ಷ ಅಡ್ಡಿಮಾಡಿದರೆ ಅದಕ್ಕೆ ನಷ್ಟವಾಗುತ್ತದೆ" ಎಂದು ಪೊಲಿಟ್‌ಬ್ಯೂರೋ ಕರೆ ನೀಡಿತು.

ಜನತಾಸರ್ಕಾರವು ರಚನೆಯಾದ ಆರು ತಿಂಗಳ ನಂತರ, ಎಂದರೆ 1977ರ ಅಕ್ಟೋಬರ್‌ನಲ್ಲಿ ಪಕ್ಷದ ಕೇಂದ್ರ ಸಮಿತಿಯು ಸಭೆಸೇರಿ ಈ ರೀತಿ ಹೇಳಿಕೆ ಕೊಟ್ಟಿತು:

"ಕೇಂದ್ರದಲ್ಲಿರುವ ಜನತಾಪಕ್ಷದ ಸರ್ಕಾರದ ನೀತಿಗಳ ಇತ್ತೀಚಿನ ಧೋರಣೆಗಳ ಬಗ್ಗೆ ಕೇಂದ್ರಸಮಿತಿಯು ತನ್ನ ಗಂಭೀರ ಕಾಳಜಿಯನ್ನು ತೋರಿಸುತ್ತದೆ. ಸರ್ವಾಧಿಕಾರದ ಶಕ್ತಿಗಳ ವಿರುದ್ಧಗಳಿಸಿದ ವಿಜಯದ ಪ್ರತಿಷ್ಠೆಯನ್ನು ಹಾಳುಮಾಡುವ ಮತ್ತು ದೇಶದ ರಾಜಕೀಯದಲ್ಲಿ ಅವಕಾಶವಾದದ ಹೊಸ ಅಲೆಯ ಹಬ್ಬುವಿಕೆಯನ್ನು ಹೆದರಿಸುವ ಪಕ್ಷದ ಆಂತರಿಕ ಜಗಳಗಳ ಬಗ್ಗೆಯೂ ತನ್ನ ಕಾಳಜಿಯನ್ನು ವ್ಯಕ್ತಪಡಿಸುತ್ತದೆ."

"ಕೃಷಿಕಾರ್ಮಿಕರಿಗೆ ವೇತನದ ಜಾರಿಯ ಮಸೂದೆಗಳು, ಭೂವಿತರಣೆ ತೆರಿಗೆ ಮತ್ತು ಸಾಲದಿಂದ ಅವರಿಗೆ ಮುಕ್ತಿ, ರೈತರ ಬೆಳೆಗೆ ತಕ್ಕಂಥ ಬೆಲೆಗಳು ವ್ಯಾಪಾರಿಗಳು ಮತ್ತು ಲೇವಾದೇವಿಗಾರರ ಹಿಡಿತದಿಂದ ಅವರಿಗೆ ವಿಮೋಚನೆ ಮುಂತಾದ ವಿಚಾರಗಳು ಹೊಸ ಆಡಳಿತಗಾರರಿಗೆ ತುರ್ತಿನದೆನಿಸಿಯೇ ಇಲ್ಲ."

"ಅತ್ಯಂತ ತುಳಿತಕ್ಕೊಳಗಾದ ವರ್ಗದವರಾದ ಹರಿಜನರ ಮೇಲಿನ ಅತ್ಯಾಚಾರಗಳು ಮುಂದುವರೆಯುತ್ತಲೇ ಇವೆ. ಬುಡಕಟ್ಟು ಜನರ ಮೇಲೂ ದಬ್ಬಾಳಿಕೆಗಳು ಮುಂದುವರೆಯುತ್ತಿವೆ."

"ದುಡಿಯುವ ವರ್ಗದ ಹೋರಾಟಗಳನ್ನು ಹತ್ತಿಕ್ಕುವುದರಲ್ಲಿ ಕೆಲವು ಜನತಾ ರಾಜ್ಯ ಸರ್ಕಾರಗಳು ಕಾಂಗ್ರೆಸ್ಸನ್ನು ಮೀರಲಾರಂಭಿಸಿವೆ."

"ಆಡಳಿತ ಪಕ್ಷದ ನಾಯಕರು ನೀಡುತ್ತಿರುವ ಕೆಲವು ವಿರೋಧಾಭಾಸದ ಹೇಳಿಕೆಗಳು ಮತ್ತು ಅದರ ಬೇರೆ ಬೇರೆ ಅಂಗಗಳ ನಡುವೆ ಕಡಿಮೆಯಾಗುತ್ತಿರುವ ಹೊಂದಾಣಿಕೆ ಎಲ್ಲವೂ ಅದರ ಘನತೆಯನ್ನು ಕುಂದಿಸುತ್ತಿವೆ."

"ಜನತಾನಾಯಕರ ಮತ್ತು ಮಂತ್ರಿಗಳ ಹೇಳಿಕೆಗಳು, ಕೆಲವು ಸರ್ಕಾರಿ ಆದೇಶಗಳು ಮತ್ತು ಸರ್ಕಾರಿ ಇಲಾಖೆಗಳ ಕಾರ್ಯಗಳು, ಇವೆಲ್ಲವೂ ತಮ್ಮ ಭಾಷೆಗಳಮೇಲೆ ಹಿಂದಿಯನ್ನು ಹೇರಲಾಗುವುದು ಎಂಬ ಭಾವನೆಯನ್ನು ಹಿಂದಿ ಮಾತನಾಡದ ಜನರಲ್ಲಿ ಮೂಡಿಸಿವೆ."

"ಹೊಸ ಸರ್ಕಾರದಲ್ಲಿ ತಮಗೆ ನ್ಯಾಯ ಸಿಗಬಹುದು "ಎಂದುಕೊಂಡಿದ್ದ ಅಲ್ಪಸಂಖ್ಯಾತರ ನಿರೀಕ್ಷೆಯು;" ಶಿಕ್ಷಣ, ಉದ್ಯೋಗ, ಸೇವೆ ಮುಂತಾದುವುಗಳಲ್ಲಿ ಅವರ ಬಗ್ಗೆ ಮುಂದುವರಿಯುತ್ತಿರುವ ಪಕ್ಷಪಾತದಿಂದ ಸುಳ್ಳಾಗುತ್ತಿದೆ. ಆಡಳಿತಪಕ್ಷದ ಕೆಲವು ಅಂಶಗಳು ಮಾಡುತ್ತಿರುವ ಹಿಂದು ಪುನಶ್ಚೇತನದ ಹೇಳಿಕೆಗಳು ಅವರಿಗೆ ಕಳವಳವನ್ನುಂಟುಮಾಡಿವೆ."

"ಸರ್ಕಾರದ ಭಾರಿ ಸೋಲು ಬೆಲೆ ನಿಯಂತ್ರಣದಲ್ಲಿದೆ." "ಆವರ್ತ ಯೋಜನೆಯ ಹೊಸಕಲ್ಪನೆಯು ಎಲ್ಲ ಗಂಭೀರ ಯೋಜನೆಗಳ ತಿರಸ್ಕಾರ ಮತ್ತು ತಪ್ಪು ತಿಳುವಳಿಕೆ ಎಂದು ಹೇಳದೆ ವಿಧಿಯಿಲ್ಲ."

"ಭಾರಿಕೈಗಾರಿಕೆಯ ಸ್ವತಂತ್ರ ಯೋಜನೆ ಇದ್ದು, ಅದು ಖಾಸಗಿ ವಿದೇಶಿ ಬಂಡವಾಳಕ್ಕೆ ಮುಕ್ತವಾಗಿ ತೆರೆದಿರಬೇಕೆಂದು ವಿಶ್ವಬ್ಯಾಂಕ್ ಒತ್ತಾಯಿಸುತ್ತಿದೆ. ಆದ್ದರಿಂದ ಸರ್ಕಾರದ ಕೈಗಾರಿಕಾ ನೀತಿಯ ಸಂಬಂಧದ ಜೊತೆ ಅಪಾಯಕಾರಿ ಧೋರಣೆಗಳನ್ನಿಟ್ಟು ಗಮನಿಸುವುದು ಆಕಸಿಕವೇನಲ್ಲ."

"ವಿದೇಶಿ ಸ್ಪರ್ಧೆ (ಆಮದು ಅಡ್ಡಿತಡೆಗಳಿಂದ ಮುಕ್ತವಾದ) ಮತ್ತು ಮುಂದುವರೆದ ಯಂತ್ರಗಳಿಂದ ಕೂಡಿದ ಬಹುದೇಶಿ ಕಂಪೆನಿಗಳಿಂದ ಜನತೆಗೆ ಕಡಿಮೆ ಉದ್ಯೋಗಗಳು ದೊರೆಯುತ್ತವೆ. ಇದು ನಿರುದ್ಯೋಗ ಸಮಸ್ಯೆಯನ್ನು ಇನ್ನಷ್ಟು ಹೆಚ್ಚಿಸುತ್ತದೆ."

"ವಿದೇಶಿ ಬಂಡವಾಳದ ಮೇಲಿನ ಅವಲಂಬನೆಯನ್ನು ಹೆಚ್ಚಿಸುವ ಈ ನೀತಿಯನ್ನು ವಿರೋಧಿಸಿ" ಕೇಂದ್ರ ಸಮಿತಿ ತನ್ನ ತೀವ್ರ ಪ್ರತಿಭಟನೆಯನ್ನು ಮುಂದಿಟ್ಟಿತು. "ಆರ್ಥಿಕತೆಯನ್ನು ಬಿಕ್ಕಟ್ಟಿನಿಂದ ಎತ್ತುವ ದಾರಿ ಇದಲ್ಲ ಇದು ಆರ್ಥಿಕ ಸೋಲಿನ ದಾರಿ, ಸರ್ವಾಧಿಕಾರದಲ್ಲಿ ಕೊನೆಗೊಂಡು, ಕಳೆದ ಚುನಾವಣೆಯಲ್ಲಿ ಜನತೆಯಿಂದ ಪೂರ್ಣವಾಗಿ ಪೆಟ್ಟುತಿಂದ, ಹಿಂದಿನ ಸರ್ಕಾರವು ಈ ದಾರಿಯಲ್ಲೇ ನಡೆಯಲಾರಂಭಿಸಿತ್ತು."

"42ನೇ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಕೈಬಿಡಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವಲ್ಲಿ ಕೇಂದ್ರ ಸರ್ಕಾರದ ಸೋಲು" ಮತ್ತು "ಶಾಸನ ಪುಸ್ತಕದಲ್ಲಿ ಮೀಸಾ ಇನ್ನೂ ಮುಂದುವರೆಯುತ್ತಿರುವುದರ" ಬಗ್ಗೆ ಕೇಂದ್ರಸಮಿತಿ ಮತ್ತೆ ತನ್ನ ಅಸಮ್ಮತಿಯನ್ನು ಸೂಚಿಸಿತು.

ಜನತಾಪಕ್ಷವು ತನ್ನ ಆರ್ಥಿಕ ನೀತಿಯನ್ನು ಪ್ರಕಟಿಸಿದ ನಂತರ ನವೆಂಬರ್ 15-19ರ ವರೆಗೆ ಪಕ್ಷದ ಕೇಂದ್ರಸಮಿತಿ ಸಭೆ ಸೇರಿತ್ತು. "ದೇಶವನ್ನು ಈಗಿನ ಬಿಕ್ಕಟ್ಟಿಗೆ ತಳ್ಳಿರುವ ಕಾಂಗೆಸ್ ಪಕ್ಷದ ನೀತಿಗಳಿಗಿಂತ ಈ ಆರ್ಥಿಕ ಹೇಳಿಕೆ ಮೂಲಭೂತವಾಗಿ ಭಿನ್ನವಾಗಿಲ್ಲ" ಎಂದು ಹೇಳಲಾಯಿತು.

"ಒಟ್ಟಾರೆಯಾಗಿ ನೋಡಿದರೆ ಈ ಆರ್ಥಿಕ ನೀತಿ ಹೇಳಿಕೆಯು ಮೇಲ್ವರ್ಗಗಳ ಹಿತಾಸಕ್ತಿಗಳನ್ನು ಮಾತ್ರ ಕಾಪಾಡುತ್ತದೆ ಮತ್ತು ಜನತೆಯ ಹಿತಾಸಕ್ತಿಗಳನ್ನು ಅಲಕ್ಷಿಸುತ್ತದೆ...ಬೂರ್ಜ್ವಾವರ್ಗ ಮತ್ತು ಭೂಮಾಲೀಕರ ವರ್ಗ ಮೈತ್ರಿಯನ್ನು ಬಲಪಡಿಸುವ ಮತ್ತು ಭಾರತ ಮತ್ತು ವಿದೇಶಿ ಏಕಸ್ವಾಮ್ಯಗಾರರ ಹೊಂದಾಣಿಕೆಗೆ ಅನುಕೂಲ ಮಾಡಿಕೊಡುವ ಹಿಂದಿನ ಕಾಂಗ್ರೆಸ್ ಸರ್ಕಾರದ ಹಳೇ ಬಂಡವಾಳಶಾಹಿ ಹಾದಿಯನ್ನೇ ಇದೂ ಹಿಡಿದಿದೆ."

"ಜನತಾ ಮತ್ತು ಇತರ ಪಕ್ಷಗಳಲ್ಲಿರುವ ಗೆಳೆಯರು ಆರೆಸ್ಸೆಸ್‌ನ ಚಟುವಟಿಕೆಗಳ ಬಗ್ಗೆ ಟೀಕಿಸಿರುವುದನ್ನು ಬೆಂಬಲಿಸುತ್ತಾ" ಕೇಂದ್ರಸಮಿತಿಯು "(ಆರೆಸ್ಸೆಸ್‌ನವರು ಒಬ್ಬ ಗಾಂಧಿಸ್ಮೃತಿ ಮಾರ್ಗದರ್ಶಕರ ಮೇಲೆ ಹಲ್ಲೆ ನಡೆಸಿದ) ಘಟನೆಯ ಬಗ್ಗೆ ಸಂಸತ್ತಿನಲ್ಲಿ ಪ್ರಧಾನ ಮಂತ್ರಿಗಳು ಪ್ರವೇಶಿಸಿ ನೀಡಿರುವ ಹೇಳಿಕೆಗಳು, ಗಾಂಧಿ ಕೊಲೆಯಲ್ಲಿ ಆರೆಸ್ಸೆಸ್‌ನ ಪಾತ್ರವನ್ನು ಮರೆಮಾಚುವ ಹಾಗೆ ಇವೆ" ಎಂದು ಹೇಳಿದೆ.

ಮಧ್ಯಪ್ರದೇಶದ ಜನತಾಸರ್ಕಾರವು ಮಿನಿ-ಮೀಸಾವನ್ನು ತಂದರೆ, ಕೇಂದ್ರದ ಜನತಾಸರ್ಕಾರವು, ಮೀಸಾದ ಅತಿಕ್ರೂರ ಅಂಶಗಳನ್ನು ಅಪರಾಧ ಕ್ರಮನೀತಿಯಲ್ಲಿ ಸೇರಿಸುವ ಸನ್ನಾಹದಲ್ಲಿದೆ. ಡಿಸೆಂಬರ್ 23ರಿಂದ28ರ ವರೆಗೆ ವಿಜಯವಾಡದಲ್ಲಿ ಸಭೆಸೇರಿದ್ದ ಕೇಂದ್ರಸಮಿಯು ಈ ರೀತಿ ಹೇಳಿತು.

"ವಿರೋಧ ಪಕ್ಷಗಳ ಪ್ರತಿಭಟನೆಯನ್ನು ಮತ್ತು ಆಡಳಿತ ಪಕ್ಷದ ಕೆಲವು ಗುಂಪುಗಳ ವಿರೋಧವನ್ನು ಮನ್ನಿಸದೆ, ಗೃಹಸಚಿವರು ಮತ್ತು ಪ್ರಧಾನಮಂತ್ರಿಗಳೂ ಸೇರಿದ ಸರ್ಕಾರಿ ವಕ್ತಾರರು, ಸಂವಿಧಾನದಲ್ಲಿ ಈ ಅಂಶ ಮುಂದುವರೆಯುವುದನ್ನು ಮತ್ತು ವಿಚಾರಣೆಯಿಲ್ಲದೆ ಬಂಧನದಲ್ಲಿಡುವ ಶಾಸನದ ಜಾರಿಯ ಸಲಹೆಯನ್ನು ದೃಢವಾಗಿ ಸಮರ್ಥಿಸಿಕೊಳ್ಳುತ್ತಿದ್ದಾರೆ." ಈ ಬಗ್ಗೆ ಸರ್ಕಾರವು ತನ್ನ ಕ್ರಮವನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಲು ಒಂದು ಬಲವಾದ ಚಳುವಳಿಯನ್ನು ಬೆಳೆಸಬೇಕೆಂದು ಕೇಂದ್ರ ಸಮಿತಿ ಕರೆಕೊಟ್ಟಿತು.

ಮುಷ್ಕರಗಳನ್ನು ನಿಲ್ಲಿಸದಿದ್ದರೆ ಮುಷ್ಕರ ನಡೆಸುತ್ತಿರುವ ನೌಕರರ ಜೊತೆ ಮಾತುಕತೆ ನಡೆಸುವುದಿಲ್ಲವೆಂಬ ಪ್ರಧಾನಮಂತ್ರಿಗಳ ಧೋರಣೆಯ ಬಗ್ಗೆಯೂ ಕೇಂದ್ರಸಮಿತಿ ತನ್ನ ತೀವ್ರ ಅಸಮ್ಮತಿಯನ್ನು ಸೂಚಿಸಿತು.

ಸರ್ಕಾರದ ಎರಡನೇ ಬಜೆಟ್ 1978ರ ಫೆಬ್ರುವರಿ 28ರಂದು ಹೊರಬಂದಿತು. ಅದು ಜನಸಾಮಾನ್ಯರ ಆಸೆಗಳನ್ನು ಸಂಪೂರ್ಣವಾಗಿ ಮಣ್ಣುಗೂಡಿಸಿದೆಯೆಂದು ಮಾರ್ಕ್ಸ್‌ವಾದಿ ಪಕ್ಷದ ಪೊಲಿಟ್ ಬ್ಯೂರೋ ಹೇಳಿತು.

ಮಾರ್ಚಿ ಒಂದರ ತನ್ನ ಹೇಳಿಕೆಯಲ್ಲಿ ಪೊಲಿಟ್ ಬ್ಯೂರೋ ಹೀಗೆ ಅಭಿಪ್ರಾಯ ಪಟ್ಟಿದೆ:

"ಅಂತಿಮವಾಗಿ, ಸದ್ಯದ ಸಾಮಾಜಿಕ-ಆರ್ಥಿಕ ವ್ಯವಸ್ಥೆಯ ತಳಹದಿಯನ್ನು ನಾಶಮಾಡದೆ ಮತ್ತು ವಿದೇಶಿ ನೆರವಿನ ಅವಲಂಬನೆಯನ್ನು ಕೊನೆಗೊಳಿಸದೆ, ಆರ್ಥಿಕತೆಯ ಬೆಳವಣಿಗೆ, ನಿರುದ್ಯೋಗದ ನಿವಾರಣೆ ಮತ್ತು ಜನತೆಯ ಜೀವನ ಸುಧಾರಣೆ ಇವುಗಳ ಬಗ್ಗೆ ಆಡುವ ಮಾತುಗಳೆಲ್ಲವೂ ಪೊಳ್ಳಾಗುತ್ತದೆ. ಕಾಂಗ್ರೆಸ್ ಸರ್ಕಾರದ ಕಳೆದ ಮೂವತ್ತು ವರ್ಷಗಳ ಕಾರ್ಯವಿಧಾನದಿಂದ ಜನತಾಪಕ್ಷದ ಸರ್ಕಾರ ಯಾವ ಪಾಠವನ್ನೂ ಕಲಿತಿಲ್ಲ."

ಕರ್ನಾಟಕ ಮತ್ತು ಆಂಧ್ರಪ್ರದೇಶಗಳ ಚುನಾವಣಾ ಫಲಿತಾಂಶಗಳನ್ನು, ಮತ್ತು ಅವೆರಡು ರಾಜ್ಯಗಳಲ್ಲಿ ಇಂದಿರಾ ಕಾಂಗ್ರೆಸ್‌ನ ವಿಜಯವನ್ನು ವಿಮರ್ಶಿಸುತ್ತಾ, ಕೇಂದ್ರ ಸಮಿತಿಯು ಮಾರ್ಚಿ 3 ರಿಂದ 7 ರವರೆಗೆ ಸಭೆ ಸೇರಿ, ಹೀಗೆ ಹೇಳಿಕೆ ನೀಡಿತು.

"ಕಳೆದವರ್ಷದ ಮಾರ್ಚಿಯಲ್ಲಿ ಮತ್ತು ನಂತರ ಜೂನ್‌ನಲ್ಲಿ ಕಾಂಗ್ರೆಸ್ ಅನುಭವಿಸಿದ ಪತನದ ಹನ್ನೊಂದು ತಿಂಗಳುಗಳ ನಂತರ ನಡೆದಿರುವ ಈ ಬೆಳವಣಿಗೆಯು, ಕೇಂದ್ರ ಮತ್ತು ವಿವಿಧ ರಾಜ್ಯಗಳಲ್ಲಿರುವ ಜನತಾಸರ್ಕಾರಗಳ ಕಾರ್ಯನಿರ್ವಹಣೆಯ ದೌರ್ಬಲ್ಯಗಳನ್ನು ಎತ್ತಿತೋರಿಸುತ್ತದೆ. ಕೇಂದ್ರದಲ್ಲಿ ಜನತಾಸರ್ಕಾರ ಅಧಿಕಾರ ವಹಿಸಿಕೊಂಡನಂತರವೂ ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರಪ್ರದೇಶಗಳ ಜನತೆಗೆ ಯಾವ ವ್ಯತ್ಯಾಸವೂ ಕಂಡುಬರದಿರುವುದು ಅನಿವಾರ್ಯ."

ಕೇಂದ್ರಸಮಿತಿ ಮತ್ತೆ ಮುಂದುವರೆಸಿ,

"ಸದ್ಯದ ಆರ್ಥಿಕ ನೀತಿಗಳಲ್ಲಿ ಪ್ರಮುಖ ಬದಲಾವಣೆ ಮಾಡಿದ ಹೊರತು ಪ್ರಜಾಪ್ರಭುತ್ವವಾದಿ ವಚನಗಳನ್ನು ಈಡೇರಿಸುವುದು ಇವತ್ತಿನ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ. ಕನಿಷ್ಠ ಆರ್ಥಿಕ ಪ್ರಜಾಪ್ರಭುತ್ವ ಮತ್ತು ಸಮಾನತೆ ಇರದಿದ್ದರೆ, ರಾಜಕೀಯ ಪ್ರಜಾಪ್ರಭುತ್ವ ಎನ್ನುವುದು ಬರಿಯ ಮಾತಾಗಿ ಉಳಿದು, ಆಚರಣೆಯಲ್ಲಿ ಒಂದಿಷ್ಟೂ ಬಾರದ ಹಕ್ಕುಗಳ ಪಟ್ಟಿಯಾಗುತ್ತದೆ ಎಂಬುದು ಮತ್ತೆ ಗೊತ್ತಾಗಿದೆ. ಮೂವತ್ತು ವರ್ಷಗಳವರೆಗೆ ಕಾಂಗ್ರೆಸ್ ಮೇಲ್ವರ್ಗಗಳ ಹಿತಾಸಕ್ತಿಯನ್ನು ಕಾಪಾಡಿ, ಕೊನೆಗೆ ಭಾರತೀಯ ಸಂವಿಧಾನವು ನೀಡಿದ ಪ್ರಜಾಪ್ರಭುತ್ವವನ್ನು ನಾಶಪಡಿಸಿತು. ದುಷ್ಟಶಕ್ತಿಗಳ ಆರ್ಥಿಕ ಪ್ರಭಾವಕ್ಕೆ ಸಿಕ್ಕಿಬಿದ್ದರೆ, ಪ್ರಜಾಪ್ರಭುತ್ವದ ರಕ್ಷಣೆಯ ಬಗ್ಗೆ ಏನೇ ಹೇಳಿಕೊಳ್ಳಲಿ ಎಲ್ಲ ಪಕ್ಷಗಳ ಹಣೆಬರಹವೂ ಕೊನೆಗೆ ಇದೇ ಆಗುತ್ತದೆ. ಆದ್ದರಿಂದ ಜನತಾಪಕ್ಷವು ತನ್ನ ಪ್ರಜಾಪ್ರಭುತ್ವವಾದಿ ಕಾರ್ಯನಿರ್ವಹಣೆಯನ್ನಷ್ಟೇ ಅಲ್ಲ ತನ್ನ ಆರ್ಥಿಕ ನೀತಿಗಳನ್ನೂ ಬದಲಾಯಿಸಿಕೊಳ್ಳಬೇಕು."

ಜನತಾಪಕ್ಷದೊಳಗಿನ ಬೆಳವಣಿಗೆಗಳ ಬಗ್ಗೆ ಕೇಂದ್ರ ಸಮಿತಿ ಹೀಗೆ ಹೇಳಿತು : "ಕಾಂಗ್ರೆಸ್ಸಿನ ಕುಖ್ಯಾತ ವಿಭಾಗದವರನ್ನು ಪ್ರಜಾಪ್ರಭುತ್ವದ ಮಹಾತ್ಮರೆಂಬಂತೆ ಇಡಿಯಾಗಿ ಜನತಾದೊಳಗೆ ಬರಮಾಡಿಕೊಂಡಿರುವುದು ಬುದ್ಧಿವಂತ ಜನತೆಯ ನಡುವೆ ಅಸಂತೃಪ್ತಿ ಮೂಡಿಸಿದೆ...ಗ್ರಾಮೀಣ ಪ್ರದೇಶಗಳಲ್ಲಿ, ಸಾಮಾನ್ಯರ ಮತ್ತು ಹರಿಜನರ ಮೇಲೆ ದಬ್ಬಾಳಿಕೆ ನಡೆಸಿದ ಭೂಮಾಲೀಕರು ಮತ್ತು ದುಷ್ಟಶಕ್ತಿಗಳು ಈಗ ಪ್ರಜಾಪ್ರಭುತ್ವದ ಹೊಸ ನಾಯಕರಾಗಿದ್ದಾರೆ."

"ಆರೆಸ್ಸೆಸ್ ನಾಯಕರು ತಮ್ಮ ಮುದ್ರೆಯನ್ನು ಸಂಸ್ಥೆಯ ಮೇಲೆ ಒತ್ತಲು ನಡೆಸಿರುವ ಪ್ರಯತ್ನಗಳು ಮತ್ತು ಸರ್ಕಾರದ ಎಲ್ಲ ಅನುಕೂಲ ಸ್ಥಾನಗಳನ್ನು ಪಡೆದುಕೊಳ್ಳಲು ಅವರು ನಡೆಸಿರುವ ಪ್ರಯತ್ನಗಳಿಂದ ಜನತಾ ಪಕ್ಷದ ಪ್ರತಿಷ್ಠೆ ಕುಂದುತ್ತಿದೆ."

"ರಾಜ್ಯ ಸರ್ಕಾರದ ಮಂತ್ರಿಮಂಡಲಗಳಲ್ಲಿ ಆರೆಸ್ಸೆಸ್ ಪ್ರತಿನಿಧಿಗಳಿಗಾಗಿ ಹೋರಾಟ ನಡೆಯುತ್ತಿರುವುದು ಮತ್ತು ಆರೆಸ್ಸೆಸ್ ಬಲ ಮತ್ತು ಮೆರವಣಿಗೆಗಳ ಪ್ರದರ್ಶನ ಇವೆಲ್ಲವೂ ಜನತೆಯಲ್ಲಿ ಜುಗುಪ್ಸೆ ಮತ್ತು ಕಾಳಜಿಯನ್ನು ಹುಟ್ಟಿಸಿವೆ....ಮುಸ್ಲಿಮ್ ಅಲ್ಪಸಂಖ್ಯಾತರ ಮೇಲೆ ಇದು ಬೀರುವ ಪರಿಣಾಮ ದುರದೃಷ್ಟಕರವಾಗಿದೆ."

"ಪ್ರಜಾಪ್ರಭುತ್ವವಾದಿ ಮತ್ತು ಆರ್ಥಿಕ ಸುಧಾರಣೆಗಳನ್ನು ವಿಳಂಬ ಮಾಡಲು ಜನತಾಪಕ್ಷದೊಳಗಿನ ರಾಜಿ ಮನೋಭಾವದ ಅಂಶಗಳು, ಕಾಂಗ್ರೆಸ್ ಬಲದ ಪ್ರಯೋಜನ ಪಡೆಯುತ್ತವೆ. ದೇಶದ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಬೇರ್ಪಡಿಸುವ ಪ್ರಯತ್ನ ನಡೆಯುತ್ತದೆ..." ಎಂದು ಹೇಳಿಕೆ ಎಚ್ಚರಿಸಿತ್ತು.

ಕೇಂದ್ರದ ಜನತಾಸರ್ಕಾರದ ಮೊದಲ ವರ್ಷ ಕಳೆದ ಕೆಲವು ದಿನಗಳಲ್ಲೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹತ್ತನೆ ಅಧಿವೇಶನವು 1978ರ ಏಪ್ರಿಲ್ 2ರಿಂದ 8ರವರೆಗೆ ಜಲಂಧರ್‌ನಲ್ಲಿ ನಡೆಯಿತು.

ಅಧಿವೇಶನದ ರಾಜಕೀಯ ಗೊತ್ತುವಳಿಯು ಜನತಾ ಸರ್ಕಾರದ ನೀತಿಗಳನ್ನು ವಿವರವಾಗಿ ಪರಿಶೀಲನೆ ನಡೆಸಿ ಹೇಳಿತು: "ಆಡಳಿತ ಪಕ್ಷವಾದ ಜನತಾಪಕ್ಷವು ಜನತೆಯು ತನಗೆ ನೀಡಿರುವ ಬೆಂಬಲವನ್ನು ಹೀರಿಕೊಂಡಿದೆ. ಆದರೆ ಜನತೆಯ ಮೇಲಿನ ಹಿಡಿತವನ್ನು ದೃಢೀಕರಿಸಿಕೊಳ್ಳಲು ಮತ್ತು ತನ್ನ ಪ್ರಜಾಪ್ರಭುತ್ವವಾದಿ ವಚನಗಳಿಗೆ ತಕ್ಕಂತೆ ಎಲ್ಲ

ಕಡೆಯಿಂದಲೂ ಸರಿಯಾದ ನೀತಿಯನ್ನು ಬೆಳೆಸಿಕೊಳ್ಳಲು ಅಸಮರ್ಥವಾಗಿದೆ."

"ಸರ್ವಾಧಿಕಾರದ ಅಪಾಯವನ್ನು ನಾಶಪಡಿಸಲು ಆಸಕ್ತವಾದ ಎಲ್ಲ ಪ್ರಜಾಪ್ರಭುತ್ವವಾದಿ ಶಕ್ತಿಗಳೂ ಜನತಾಪಕ್ಷದ ಆರ್ಥಿಕ ನೀತಿಗಳನ್ನು ಪ್ರತಿಭಟಿಸಬೇಕು. ಆಳುವ ವರ್ಗಗಳ ಹಿತಾಸಕ್ತಿಗಾಗಿ ಜನತೆ ನರಳದಂತೆ ನೋಡಿಕೊಳ್ಳಬೇಕು...ಈ ನೀತಿಗಳ ಅನುಸರಣೆಯು ಜನತಾಪಕ್ಷ ಮತ್ತು ಸರ್ಕಾರದೊಳಗಿನ ಸರ್ವಾಧಿಕಾರಿ ಧೋರಣೆಗಳನ್ನು ಮಾತ್ರ ಬೆಂಬಲಿಸುತ್ತದೆ" ಎಂದು ಗೊತ್ತುವಳಿ ಎಚ್ಚರಿಸಿತು.

ಜನತಾಪಕ್ಷದ ಬಗ್ಗೆ ರಾಜಕೀಯ ಗೊತ್ತುವಳಿಯಲ್ಲಿ ಹೀಗಿದೆ: "ಜನತಾಪಕ್ಷದ ಮುಖ್ಯ ಘಟಕಗಳಲ್ಲಿನ ವ್ಯಕ್ತಿಗಳು ಪ್ರಜಾಪ್ರಭುತ್ವ ವಿರೋಧಿಗಳೂ ಮತ್ತು ಪ್ರತಿಗ್ರಾಮಿಗಳೂ ಆಗಿದ್ದಾರೆ....ಏಕಪಕ್ಷದ ಆಡಳಿತದಲ್ಲಿನೊಂದು, ಸ್ವಾತಂತ್ರ್ಯ ಕಳೆದುಕೊಂಡಿದ್ದ ಇವರು, ಸರ್ವಾಧಿಕಾರದ ವಿರುದ್ಧ ಹೋರಾಡಿ, ಸಂಸತ್ ಪ್ರಜಾಪ್ರಭುತ್ವದ ನಿಯಮಗಳನ್ನು ಉದ್ಧರಿಸಿ, ಅವುಗಳಿಗೆ ಹೋರಾಡಬೇಕಿತ್ತು...ಎಲ್ಲರೂ ಇದಕ್ಕೆ ಬದ್ಧರಲ್ಲವೆಂಬುದು ನಿಜ. ಡೋಲಾಯಮಾನಗಳು, ಹಿಂಜರಿಕೆಗಳು ಬರಬಹುದು. ಮೋಸಗಾರಿಕೆ ಕೂಡಾ ನಡೆಯಬಹುದು."

"ಪಕ್ಷದ ವರ್ಗದೃಷ್ಟಿಕೋನ ಮತ್ತು ಸಿದ್ಧಾಂತಗಳಿಂದ ಪಕ್ಷದಲ್ಲಿ ಮೇಲುಗೈಯಾಗಿರುವ ವರ್ಗಹಿತಾಸಕ್ತಿಗಳು, ವಚನಗಳ ಈಡೇರಿಕೆಯಲ್ಲಿ ಮತ್ತು ಪ್ರಜಾಪ್ರಭುತ್ವದ ದಾರಿಯಲ್ಲಿ ಅಡ್ಡಿಬರಬಹುದು...ಸರ್ವಾಧಿಕಾರದ ನೆಲ, ಸರ್ವಾಧಿಕಾರದ ವಿರುದ್ಧದ ಹೋರಾಟವನ್ನು ಅಡಗಿಸುವ ಪ್ರಯತ್ನಗಳನ್ನು ತರುತ್ತದೆ. ಅದು ಜನತಾಪಕ್ಷದೊಳಗೆ ಸರ್ವಾಧಿಕಾರಿ ಧೋರಣೆಗಳನ್ನು ಬೆಳೆಸಿ, ಪ್ರೋತ್ಸಾಹಿಸುತ್ತದೆ."

ರಾಜಕೀಯ ಗೊತ್ತುವಳಿಯು ಮತ್ತೆ ಆರೆಸ್ಸೆಸ್‌ನ ಅಪಾಯವನ್ನು ಒತ್ತಿ ಹೇಳಿತು: "ಬೇರೆಯಾಗಿ ಸಂಘಟಿತವಾಗುತ್ತಿರುವ ಆರೆಸ್ಸೆಸ್ ಈಗೊಂದು ಬಲವತ್ತಾದ ಶಕ್ತಿಯಾಗಿ ಬೆಳೆಯುತ್ತಿದ್ದು ಅಪಾಯಕಾರಿ ಬೆಳವಣಿಗೆಗಳನ್ನು ಸೂಚಿಸುತ್ತಿದೆ. ರಾಜ್ಯದ ನೀತಿಗಳಲ್ಲಿ ಸಾಂಪ್ರದಾಯಕತೆ ಹೆಚ್ಚುತ್ತಿದ್ದು, ಪ್ರಗತಿಶೀಲ ಪುಸ್ತಕಗಳನ್ನು ನಿಷೇಧಿಸಲಾಗುತ್ತಿದೆ. ಆರೆಸ್ಸೆಸ್ ಮತ್ತು ಜನತಾಪಕ್ಷದ ಮೇಲೆ ಅದಕ್ಕಿರುವ ಹಿಡಿತವನ್ನು ಪಕ್ಷ ಅಲಕ್ಷಿಸಲಾಗುವುದಿಲ್ಲ."

ಪಕ್ಷದ ಅಧಿವೇಶನದ ನಂತರ ಮೊದಲಬಾರಿಗೆ ಏಪ್ರಿಲ್ 9 ರಿಂದ 11 ರವರೆಗೆ ಸೇರಿದ್ದ ಪೊಲಿಟ್‌ಬ್ಯೂರೋ ಸಭೆಯು, "ಇತ್ತೀಚಿನ ರಾಜಕೀಯ ಬೆಳವಣಿಗೆಗಳ ಬಗ್ಗೆ ವಿಪರೀತ ಕಾಳಜಿ ಮತ್ತು ಭಯವನ್ನು" ವ್ಯಕ್ತಪಡಿಸಿತು.

"ಕೈಗಾರಿಕಾ ಮತ್ತು ಕೃಷಿಕಾರ್ಮಿಕರ ಮೇಲಿನ ಭೀಕರ ಗೋಲಿಬಾರುಗಳು, ಹರಿಜನರ ಮೇಲಿನ ಭಯಂಕರ ಹಲ್ಲೆಗಳು, ಮತ್ತು ಜನತಾ ಮುಖ್ಯಮಂತ್ರಿಗಳಿಂದ ಈ ಘಟನೆಗಳ ಉದ್ಧಟ ಮತ್ತು ನೀತಿಗೆಟ್ಟ ಸಮರ್ಥನೆಗಳು, ಕೊನೆಗೆ ಬೆಲೆನಿಯಂತ್ರಣದಲ್ಲಿ ವೈಫಲ್ಯ, ಇವೆಲ್ಲವೂ ಇಂದಿರಾಗಾಂಧಿಗೆ ಒಳ್ಳೆಯ ಗ್ರಾಸವನ್ನು ಒದಗಿಸಿದೆ" ಎಂದು ಪೊಲಿಟ್‌ಬ್ಯೂರೋ ಹೇಳಿದೆ.

"ಪ್ರತಿ ರಾಜ್ಯವೂ ಪ್ರತಿ ಮಂತ್ರಿಮಂಡಲವೂ ಒಡಕುಗಳಿಂದ ಕೂಡಿದೆ" "ಈ ಬಿಕ್ಕಟ್ಟಿನಿಂದ ಇಂದಿರಾಗಾಂಧಿಯ ಸವಾಲನ್ನು ಎದುರಿಸುವ ಜನತಾಪಕ್ಷದ ಬಲವು ಕುಂದಿದೆ. ಆಡಳಿತದ ಮೇಲೆ ಇರುವ ಹಿಡಿತವು ಸಡಿಲವಾಗಿ ಜನತೆಯ ನಡುವೆ ಅದಕ್ಕಿದ್ದ ಪ್ರತಿಷ್ಠೆ ಕುಂದಿಹೋಗಿದೆ."

"ಸರ್ವಾಧಿಕಾರಿ ಶಕ್ತಿಗಳು ತಲೆಎತ್ತುವುದಕ್ಕೆ ಮತ್ತು ಸವಾಲು ಹಾಕುವುದಕ್ಕೆ ಜನತಾ ಸರ್ಕಾರಗಳು ಅನುಸರಿಸುತ್ತಿರುವ ಪ್ರತಿಗಾಮಿ ಮತ್ತು ಅಲಕ್ಷ್ಯ ನೀತಿಗಳೇ ಕಾರಣ" ಎಂದು ಪೊಲಿಟ್‌ಬ್ಯೂರೋ ಹೇಳಿದೆ.

"ಕಷ್ಟಕರವಾದ ಪರಿಸ್ಥಿತಿಯನ್ನು ಕ್ರಿಯಾತ್ಮಕವಾಗಿ ಎದುರಿಸುವುದನ್ನು ಬಿಟ್ಟು ಆಡಳಿತ ಪಕ್ಷದ ನಾಯಕರು ನಿರ್ಲಿಪ್ತ ಮನೋಭಾವ ತೋರಿಸುತ್ತಿದ್ದಾರೆ. ತಮ್ಮ ಬೆಲೆ ಮತ್ತು ಪ್ರಭಾವಗಳು ತೀವ್ರವಾಗಿ ಇಳಿಯುತ್ತಿರುವುದನ್ನು ಅವರು ಗಮನಕ್ಕೆ ತಂದುಕೊಂಡಂತೆ ಕಾಣುತ್ತಿಲ್ಲ."

ಪ್ರತಿಗಾಮಿ ಶಕ್ತಿಗಳ ವಿರುದ್ಧ ಪ್ರತಿಭಟಿಸುವ ಜನತಾಪಕ್ಷದ ಪ್ರಜಾಪ್ರಭುತ್ವವಾದಿ ವಿಭಾಗಗಳ ಪ್ರಯತ್ನಗಳು "ಅವರು ಜನತೆಯ ವಿಶಾಲ ಪ್ರತಿಭಟನಾ ಚಳುವಳಿಗಳ ಜೊತೆ ಸೇರಿದಾಗ ಮಾತ್ರ ಫಲಪ್ರದವಾಗುತ್ತವೆ" ಎಂದು ಪೊಲಿಟ್‌ಬ್ಯೂರೋ ಹೇಳಿದೆ.

ಕೇಂದ್ರ-ರಾಜ್ಯ ಸಂಬಂಧಗಳ ಪ್ರಶ್ನೆಯನ್ನು ಕುರಿತು,"ಈ ವಿಚಾರದೊಳಗಿನ ಪ್ರಜಾಪ್ರಭುತ್ವವಾದಿ ಸ್ವರೂಪವನ್ನು ಅರಿತುಕೊಳ್ಳಲು ಜನತಾಪಕ್ಷದ ನಾಯಕರು ಅಸಮರ್ಥರಾಗಿದ್ದಾರೆ. ರಾಜ್ಯಗಳಿಗೆ ಹೆಚ್ಚು ಅಧಿಕಾರ ಕೊಡುವುದನ್ನು ವಿರೋಧಿಸಿ, ಸರ್ವಾಧಿಕಾರದ ದಾರಿಯನ್ನು ಹಿಡಿಯುತ್ತಿದ್ದಾರೆ. ರಾಜ್ಯಗಳ ಜನಾಭಿಪ್ರಾಯವನ್ನು ಕಡೆಗಣಿಸಿ, ರಾಜಕೀಯ ವಿಕೇಂದ್ರೀಕರಣದ ಬಗ್ಗೆ ಅವರಿತ್ತಿದ್ದ ಭರವಸೆಗಳು ಕೇವಲ ಮಾತಿನ ಪ್ರಚಾರ ಎಂಬುದನ್ನು ತೋರಿಸಿಕೊಳ್ಳುತ್ತಿದ್ದಾರೆ."

ಜೂನ್ 10ರಿಂದ14ರ ವರೆಗೆ ಸಭೆ ಸೇರಿದ್ದ ಕೇಂದ್ರ ಸಮಿತಿಯು "ಸರ್ವಾಧಿಕಾರಿ ಶಕ್ತಿಗಳು ಹಾಕುತ್ತಿರುವ ಸವಾಲನ್ನು ಎದುರಿಸಲು ಜನತಾಪಕ್ಷ ಅಸಮರ್ಥವೆಂದು ತೋರಿಸಿಕೊಳ್ಳುತ್ತಿದೆ" ಎಂದು ಮತ್ತೆ ಎಚ್ಚರಿಸಿದೆ.

"ಭೂತಲಿಂಗಂ ಸಮಿತಿಯ ಶಿಫಾರಸುಗಳು ಮತ್ತು ಹೊಸ ಕೈಗಾರಿಕಾ ಸಂಬಂಧಗಳ ಮಸೂದೆಯು, ನಗರದ ಮತ್ತು ಗ್ರಾಮೀಣ ಜನತೆಯ ವಿರುದ್ಧವಾದ ಹೊಸ ದಬ್ಬಾಳಿಕೆ ಅಸ್ತ್ರಗಳಾಗಿವೆ" ಎಂದೂ ಕೇಂದ್ರಸಮಿತಿ ಹೇಳಿದೆ.

"ಚುನಾವಣಾ ಹೋರಾಟದಲ್ಲಿ ಪಡೆದಿದ್ದ ಒಗ್ಗಟ್ಟನ್ನು ಜನತಾಪಕ್ಷ ಶೀಘ್ರವಾಗಿ ಕಳೆದುಕೊಳ್ಳುತ್ತಿದೆ. ಶಾಸಕಾಂಗಗಳು ಮತ್ತು ಕೆಳಗಿನ ಕಾರ್ಯಕರ್ತರಿಗೆ ಸೀಮಿತವಾಗಿದ್ದ ಕಲಹಗಳು ಈಗ ಪಕ್ಷದ ಉನ್ನತ ನಾಯಕರಲ್ಲೂ ಇವೆ."

1978ರ ಜುಲೈ ಒಂದರಂದು ಪಕ್ಷದ ಪೊಲಿಟ್‌ಬ್ಯೂರೋ ಜನತಾಪಕ್ಷದ ಬೆಳವಣಿಗೆಗಳ ಬಗ್ಗೆ ಒಂದು ಹೇಳಿಕೆ ನೀಡಿ, "ಜನತಾಪಕ್ಷದೊಳಗಿನ ಕಲಹಗಳು ಹೊರಬಂದು ಮಂತ್ರಿಮಂಡಲದ ಬಿಕ್ಕಟ್ಟಿಗೆ ದಾರಿಮಾಡಿ" ಚರಣ್ ಸಿಂಗ್ ಮತ್ತು ರಾಜ್‌ನಾರಾಯಣರ ರಾಜೀನಾಮೆಗೆ ಕಾರಣವಾದದ್ದರ ಬಗ್ಗೆ ಕಾಳಜಿ ವ್ಯಕ್ತಪಡಿಸಿತು.

ಈ ಇಡೀ ಘಟನೆಯು "ಜನತಾಪಕ್ಷದೊಳಗಿನ ಅಪಾಯಕಾರಿ ದೌರ್ಬಲ್ಯಗಳನ್ನು, ಒಗ್ಗಟ್ಟಿನ ಕೊರತೆಯನ್ನು ಮತ್ತು ಹಳೆಗುಂಪುಗಳಿಗೆ ವಿಧೇಯತೆ ತೋರುವ ಹಟಗಳನ್ನು ಬಹಿರಂಗಪಡಿಸುತ್ತದೆ. ಇದು ಪಕ್ಷವು ತನ್ನ ದೊಡ್ಡ ಜವಾಬ್ದಾರಿಗಳನ್ನು ಎದುರಿಸದಂತೆ ಮಾಡಿ, ಜನತೆಯ ಬಗ್ಗೆ ಅಲಕ್ಷ್ಯ ತಾಳುವಂತೆ ಮಾಡುತ್ತದೆ."

"ಚುನಾವಣಾ ಪ್ರತಿಜ್ಞೆಗಳನ್ನು ಈಡೇರಿಸುವ ತನ್ನ ವಚನವನ್ನು ಮತ್ತೆ ಹೇಳಿ, ಅದರ ಆಧಾರದ ಮೇಲೆ ಒಗ್ಗೂಡದೆ ಇದ್ದರೆ, ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಬೇಕಾದ ಒಗ್ಗಟ್ಟು ಮತ್ತು ಬಲ ಪಕ್ಷಕ್ಕೆ ಬರುವುದಿಲ್ಲ ಎಂದು ಪೊಲಿಟ್‌ಬ್ಯೂರೋ ಅಭಿಪ್ರಾಯ ಪಡುತ್ತದೆ."

"ಸದ್ಯದ ಮಂತ್ರಿಮಂಡಲ ಬಿಕ್ಕಟ್ಟಿಗಿಂತ ತೀವ್ರವಾದ ಕಲಹವು ಎಂದರೆ ಜನತಾಪಕ್ಷದ ಚುನಾವಣಾ ಪ್ರತಿಜ್ಞೆಗಳು ಮತ್ತು ಕಳೆದ 14 ತಿಂಗಳಲ್ಲಿ ಅದರ ಕಾರ್ಯನಿರ್ವಹಣೆ, ಇವೆರಡರ ನಡುವಿನ ಹೋರಾಟವು ಮುಂದೆ ಬರಲಿದೆ ಎಂಬುದನ್ನು ಜನತಾಪಕ್ಷದ ನಾಯಕರು ಸದಸ್ಯರು ಮತ್ತು ಹಿತೈಷಿಗಳ ಗಮನಕ್ಕೆ ಮಾರ್ಕ್ಸ್‌ವಾದಿ ಪಕ್ಷದ ಪೊಲಿಟ್‌ಬ್ಯೂರೋ ತರುತ್ತದೆ. ಆಡಳಿತ ಪಕ್ಷ ಮತ್ತು ಸರ್ಕಾರಗಳ ನೀತಿಗಳಲ್ಲಿ ಬದಲಾವಣೆ ಆದಾಗ ಮಾತ್ರ ಇದನ್ನು ಪರಿಹರಿಸಬಹುದು."

"ತಮ್ಮ ಪಕ್ಷ ಒಂದು ಒಗ್ಗಟ್ಟಿನ ಸಂಸ್ಥೆಯಾಗಿ ಉಳಿಯಬೇಕಾದರೆ ಈ ದಿಕ್ಕಿನಲ್ಲಿ ನಡೆಯಬೇಕೆಂದು ಆ ಪಕ್ಷದ ನಾಯಕರು ಮತ್ತು ಸದಸ್ಯರಿಗೆ" ಪೊಲಿಟ್ ಬ್ಯೂರೋ ಮನವಿ ಮಾಡಿದೆ.

ವಾಪಸ್ಸು ಬರಲಾರದಷ್ಟು ದೂರ ಹೋಗಿರುವ ಪಕ್ಷದ ನೀತಿರಹಿತ ಆಂತರಿಕ ಜಗಳಗಳ ಬಗ್ಗೆ ಆಗಸ್ಟ್ 5 ರಂದು ಪೊಲಿಟ್‌ಬ್ಯೂರೋ ಒಂದು ಹೇಳಿಕೆ ಕೊಟ್ಟಿದೆ: ಜನತೆಯ ತೀರ್ಪನ್ನು ಧಿಕ್ಕರಿಸಿ, ಸರ್ವಾಧಿಕಾರಿ ಶಕ್ತಿಗಳು ಅಧಿಕಾರ ಕಸಿದುಕೊಳ್ಳಲು ಸಹಾಯಮಾಡುತ್ತ, ಜನತಾಪಕ್ಷ ಮತ್ತು ಸರ್ಕಾರಗಳು (ಪ್ರಧಾನಮಂತ್ರಿಗಳ) ಹಟದ ಮುಂದೆ ನಿಶ್ಚಲವಾಗಿ ನಿಂತಿವೆ. ಪ್ರಜಾಪ್ರಭುತ್ವವಾದಿ ನಿಯಮಗಳನ್ನು ಅನುಸರಿಸಿದರೆ ಮತ್ತು ವ್ಯಕ್ತಿಗಳು ಎಷ್ಟೇ ದೊಡ್ಡವರಾಗಿರಲಿ ಪಕ್ಷದ ತೀರ್ಮಾನಗಳನ್ನು ಒಪ್ಪಿಕೊಂಡರೆ ಮತ್ತಷ್ಟು ಕೆಡುಕನ್ನು ತಡೆಯಬಹುದು. ತನ್ನ ಸಂಸ್ಥೆ ಮತ್ತು ಜನತೆಗಿಂತ ತಾನು ದೊಡ್ಡವನೆಂದು ಯಾರೂ ಭಾವಿಸುವಂತಿಲ್ಲ."

45ನೇ ಸಂವಿಧಾನ ತಿದ್ದುಪಡಿ ಮಸೂದೆಯಲ್ಲಿ ಜನತಾಪಕ್ಷದ ಸರ್ಕಾರವು ಆಂತರಿಕ ತುರ್ತುಪರಿಸ್ಥಿತಿ ತರುವ ಅಧಿಕಾರವನ್ನು ಕೈಬಿಡಲು ಒಪ್ಪಲಿಲ್ಲ (ಇದನ್ನು ಇಂದಿರಾಕಾಂಗ್ರೆಸ್‌ನ ಬೆಂಬಲದೊಂದಿಗೆ ಅಂಗೀಕರಿಸಲಾಯಿತು, ಮತ್ತು ಸ್ಥಾನಬದ್ಧತೆ ಅಧಿಕಾರವನ್ನೂ ಉಳಿಸಿಕೊಂಡಿತು. (ಇದನ್ನು ಎರಡೂ ಕಾಂಗ್ರೆಸ್‌ಗಳ ಬೆಂಬಲದಿಂದ ಅಂಗೀಕರಿಸಲಾಯಿತು.) ಸಂವಿಧಾನದ ಮೂಲಭೂತ ಅಂಶಗಳನ್ನು ತಿದ್ದುಪಡಿ ಮಾಡಬೇಕೆನ್ನುವ ಸೂಚನೆಯನ್ನು ರಾಜ್ಯಸಭೆಯಲ್ಲಿ ಎರಡೂ ಕಾಂಗ್ರೆಸ್‌ಗಳು ಸೋಲಿಸಿದವು.

ಸೆಪ್ಟೆಂಬರ್ 27ರಿಂದ ಅಕ್ಟೋಬರ್ 1ರ ವರೆಗೆ ಸಭೆಸೇರಿದ್ದ ಕೇಂದ್ರ ಸಮಿತಿಯು ಇದರ ಹೊಣೆಯನ್ನು ಜನತಾಪಕ್ಷದ ನಿರ್ಲಕ್ಷ್ಯದ ಮೇಲೆ ಹೊರಿಸಿತು. "45ನೇ ಸಂವಿಧಾನ ತಿದ್ದುಪಡಿಯಾದ ನಂತರವೂ ಸಂವಿಧಾನವು 42ನೇ ತಿದ್ದುಪಡಿಯಾದಾಗ ಹೇಗೆ ಇತ್ತೋ ಹಾಗೇ ಉಳಿದಿದೆ."

ಜನತಾಸರ್ಕಾರದ ಆರ್ಥಿಕ ಕ್ರಮಗಳು ಮತ್ತು ನೀತಿಗಳು "ದಿನೇ ದಿನೇ ಜನವಿರೋಧಿಯಾಗುತ್ತಿವೆ" ಎಂದು ಕೇಂದ್ರಸಮಿತಿ ಹೇಳಿದೆ.

"ದೇಶದ ಸ್ವತಂತ್ರ ಆರ್ಥಿಕ ಬೆಳವಣಿಗೆಗೆ ಧಕ್ಕೆ ತರುವುದಷ್ಟೇ ಅಲ್ಲದೆ ರಾಜಕೀಯ ಸ್ವಾತಂತ್ರ್ಯಕ್ಕೂ ಹಾನಿತರುವ ಈ ಪ್ರಜಾಪ್ರಭುತ್ವವಿರೋಧಿ ಜನವಿರೋಧಿ ನೀತಿಗಳನ್ನು" ಕೇಂದ್ರ ಸಮಿತಿ ತೀವ್ರವಾಗಿ ಪ್ರತಿಭಟಿಸಿತು.

"ದುಷ್ಟಶಕ್ತಿಗಳಿಂದ ದೇಶದಾದ್ಯಂತ ಏಳುತ್ತಿರುವ ಕೋಮು ಕಲಹದ ವಿರುದ್ಧ" ಜನತೆಯನ್ನು ಕೇಂದ್ರಸಮಿತಿ ಎಚ್ಚರಿಸಿತು.

ಜನತಾಸರ್ಕಾರದ ಮೂರನೇ ಬಜೆಟ್‌ನ ನಂತರ, 1979ರ ಮಾರ್ಚಿ 7 ರಂದು ಪೊಲಿಟ್‌ಬ್ಯೂರೋ ಹೇಳಿಕೆ ನೀಡಿ, ಸ್ವಲ್ಪ ಪರಿಹಾರ ಸಿಗಬಹುದೆಂದು ನಿರೀಕ್ಷಿಸಿದ್ದ ಜನತೆಗೆ ನಿರಾಶೆಯಾಗಿದೆ ಎಂದಿತು.

1979ರ ಏಪ್ರಿಲ್ 4ರಿಂದ 7ರ ವರೆಗೆ ಸಭೆ ಸೇರಿದ್ದ ಕೇಂದ್ರಸಮಿತಿಯು ಈ ಹೇಳಿಕೆ ನೀಡಿದೆ." (ಜನತಾಸರ್ಕಾರದ) ಈ ಜನವಿರೋಧಿ ನೀತಿಗಳ ದೆಸೆಯಿಂದ ಮತ್ತು ಜನತೆಯ ಜೀವನ ಮಟ್ಟಗಳ ಮೇಲಿನ ಆಕ್ರಮಣದಿಂದ ಜನತೆಯಲ್ಲಿ ಅಸಮಾಧಾನ ಮೂಡುತ್ತಿದೆ. ಇದು ಕಾರ್ಮಿಕರ, ಗ್ರಾಮೀಣ ಕೆಲಸಗಾರರ, ನೌಕರರ, ವಿದ್ಯಾರ್ಥಿಗಳ ಮತ್ತು ಮಧ್ಯಮವರ್ಗದ ಇತರ ಗುಂಪುಗಳ ಮುಷ್ಕರಗಳಲ್ಲಿ ಕಾಣಿಸಿಕೊಳ್ಳುತ್ತಿದೆ."

'ನಮ್ಮ ಜನತೆಯ ಪ್ರಜಾಪ್ರಭುತ್ವವಾದಿ ಒಗ್ಗಟ್ಟನ್ನು ಹಾಳುಮಾಡುವ ಸಲುವಾಗಿ ವಿವಿಧ ಬೂರ್ಜ್ವಾ ಪಕ್ಷಗಳು ಮತ್ತು ಸಂಘಟನೆಗಳು ಜನತೆಯ ಈ ಅಸಮಾಧಾನವನ್ನು ಕೋಮುವಾದ ಮತ್ತು ಜಾತಿವಾದದ ಕಡೆಗೆ ತಿರುಗಿಸುತ್ತಿವೆ" ಎಂದು ಕೇಂದ್ರಸಮಿತಿ ಹೇಳಿದೆ.

ಏಪ್ರಿಲ್ 26ರ ಹೇಳಿಕೆಯಲ್ಲಿ ಪೊಲಿಟ್‌ಬ್ಯೂರೋ ಹೀಗೆ ಹೇಳಿದೆ: "ಇಂದಿರಾಗಾಂಧಿ ನೇತೃತ್ವದ ಸರ್ವಾಧಿಕಾರ ಶಕ್ತಿಗಳ ವಿರುದ್ಧ ಹೋರಾಟದ ಅವಧಿಯಲ್ಲಿ ಜನತಾಪಕ್ಷ ಅಸ್ತಿತ್ವಕ್ಕೆ ಬಂತು. ಹಿಂದೂ ಪುನಶ್ಚೇತನವಾದ ಮತ್ತು ಕೋಮು, ವಿನಾಶ ಶಕ್ತಿಗಳ ವಿರುದ್ಧ ಸ್ಪಷ್ಟ ಮತ್ತು ದೃಢ ನಿಲುವನ್ನು ತಳೆಯದಿದ್ದರೆ ಪಕ್ಷವು ತನ್ನ ಕರ್ತವ್ಯಗಳನ್ನು ನಿರ್ವಹಿಸಲಾರದೆಂದು ಜನತಾ ಸರ್ಕಾರದ ಎರಡು ವರ್ಷಗಳ ಅನುಭವ ತೋರಿಸಿದೆ. ಜನತಾಪಕ್ಷದೊಳಗೆ ವಿಲೀನವಾಗಿ ಅದರ ಶಿಸ್ತಿಗೆ ಒಳಪಡಲು ಇಚ್ಛಿಸದ ಆರೆಸ್ಸೆಸ್,ಅದೇ ವೇಳೆಗೆ ಆಡಳಿತ ಪಕ್ಷದ ಅಂಗವಾಗಿ ತನಗೆ ದತ್ತವಾಗಿರುವ ಸ್ಥಾನವನ್ನು ಆಡಳಿತ ಯಂತ್ರದೊಳಗೆ ಪ್ರವೇಶಿಸಲು ಉಪಯೋಗಿಸಿಕೊಂಡು, ಕೋಮು ಕಲಹದ ಸಾಧನವಾಗಿ ಅದನ್ನು ಬಳಸಲು ಯತ್ನಿಸುತ್ತಿದೆ. ಆರೆಸ್ಸೆಸ್ ನಾಯಕರ "ದ್ವಂದ್ವಪಾತ್ರ" ಕೊನೆಗೊಳ್ಳಬೇಕು ಎಂದು ಜನತಾ ನಾಯಕತ್ವದ ಒಂದು ಗುಂಪು ಮತ್ತು ಸದಸ್ಯರು ಒತ್ತಾಯಿಸಿರುವುದು ಸರಿಯೇ ಆಗಿದೆ."

ಜೂನ್25ರ ಹೇಳಿಕೆಯಲ್ಲಿ ಪೊಲಿಟ್‌ಬ್ಯೂರೋ ಕೇಂದ್ರಸರ್ಕಾರವು ಪೋಲೀಸ್‌ಸಿಬ್ಬಂದಿಯ ದಂಗೆಯ ಬಗ್ಗೆ ತಳೆದಿರುವ ಧೋರಣೆಯ ಬಗ್ಗೆ ಗಂಭೀರವಾಗಿ ಪ್ರತಿಭಟಿಸಿತು. "ಪ್ರಜಾಪ್ರಭುತ್ವವಾದಿ ಸ್ವಾತಂತ್ರ್ಯಗಳಿಗೆ ಬದ್ಧವಾಗಿರುವ ಸರ್ಕಾರ, ತನ್ನ ಸ್ವಂತ ಸಿಬ್ಬಂದಿಯ ಬಗ್ಗೆ ಹೀಗೆ ನಡೆದುಕೊಂಡಿರುವುದು ಆಶ್ಚರ್ಯವೆನಿಸುತ್ತದೆ" ಎಂದು ಹೇಳಿಕೆ ಸೂಚಿಸಿದೆ.

ಹೀಗೆ, ಜನತಾಸರ್ಕಾರದ ನೀತಿಗಳು ಜನವಿರೋಧಿಯಾದಾಗ ಆರಂಭದಿಂದಲೂ ಮಾರ್ಕ್ಸ್‌ವಾದಿ ಪಕ್ಷ ಅವುಗಳನ್ನು ಟೀಕಿಸುತ್ತಾ ಬಂದಿದೆ. ಜನತಾ ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ಐಕ್ಯಹೋರಾಟಗಳನ್ನು ಅದು ನಡೆಸಿ, ಅದರ ಜೊತೆ ಸೇರಿದೆ. ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಹೋರಾಟವನ್ನು ಮೆದುಗೊಳಿಸುವುದರ ಬಗ್ಗೆ ಮತ್ತು ಜನತಾಪಕ್ಷದೊಳಗೆ ಸರ್ವಾಧಿಕಾರಿ ಧೋರಣೆಗಳು ತಲೆಎತ್ತುತ್ತಿರುವುದರ ಬಗ್ಗೆ ಮತ್ತು ಪಕ್ಷದೊಳಗೆ ಆರೆಸ್ಸೆಸ್-ಜನಸಂಘ ಪ್ರಬಲವಾಗುತ್ತಿರುವುದರ ಬಗ್ಗೆ ಅದು ಜನತಾನಾಯಕರನ್ನು ಪದೇ ಪದೇ ಎಚ್ಚರಿಸಿದೆ.

ಆದರೆ ಪೊಲಿಟ್‌ಬ್ಯೂರೋನ ಇತ್ತೀಚಿನ ಹೇಳಿಕೆ ತಿಳಿಸುವ ಹಾಗೆ "ತನ್ನ ಬಹುಸಂಖ್ಯಾತ ಬೆಂಬಲದಿಂದ ಮೂಡಿರುದ ಧೋರಣೆಯಿಂದಾಗಿ ಸರ್ಕಾರ ಈ ಉಪದೇಶವನ್ನು ಅಲಕ್ಷಿಸಿದೆ."

(ಈಗಾಗಲೆ ಫಲಿತಾಂಶವು ಏನೆಂದು ಗೊತ್ತಾಗಿದೆ. ಮೊರಾರ್ಜಿ ದೇಸಾಯಿಯವರು ರಾಜಿನಾಮೆ ಕೊಡುವುದಕ್ಕಿಂತ ಕೆಲವು ದಿನಗಳ ಹಿಂದೆ ಪ್ರಕಟವಾದ ಲೇಖನವನ್ನು ಇಲ್ಲಿ ಕೊಟ್ಟಿರುವೆವು.)

# ......ಹೋರಾಟಕ್ಕೆ ಸಿದ್ಧರಾಗಲು ವಿದ್ಯಾರ್ಥಿಗಳಿಗೆ ಕರೆ

[2ನೇ ಪುಟದಿಂದ]

9) ದುಡಿಯುವ ಹಕ್ಕನ್ನು, ಮೂಲಭೂತ ಹಕ್ಕನ್ನಾಗಿ ಮಾಡುವುದು, ಕೆಲಸ ಸಿಗುವವರೆಗೆ ನಿರುದ್ಯೋಗ ಭತ್ಯ ಸಿಗಬೇಕು,

10) ಜನವಿರೋಧಿ ಕಾಯ್ದೆಗಳಾದ, ಕೈಗಾರಿಕಾ ಸಂಬಂಧ ಮಸೂದೆ, ಸ್ಥಾನಬದ್ಧತಾ ಕಾಯ್ದೆ ಮುಂತಾದುವನ್ನು ಹಿಂತೆಗೆದುಕೊಳ್ಳಬೇಕು.

ಮೇಲ್ಕಾಣಿಸಿದ ಹತ್ತು ಅಂಶಗಳ ಬೇಡಿಕೆ ದಿನವನ್ನು ರಾಷ್ಟ್ರಾದ್ಯಂತ ಅಂದು ಆಚರಿಸಲಾಗುವುದು.

**ನಿರ್ಣಯಗಳು :**

1) ಲೋಕಸಭೆಯಲ್ಲಿ ಎಡಪಕ್ಷಗಳ 42 ಜನ ಸಂಸತ್ ಸದಸ್ಯರು, ಸರ್ವಾಧಿಕಾರಿ ಶಕ್ತಿಗಳು ಮತ್ತು ಆರೆಸ್ಸೆಸ್-ಜನಸಂಘಗಳನ್ನು ಒಳಗೊಂಡಿರುವ ಯಾವುದೇ ಸರಕಾರವನ್ನು ಬೆಂಬಲಿಸದಿರಲು ನಿರ್ಧರಿಸಿರುವುದನ್ನು ಎಸ್. ಎಫ್. ಐ. ಕಾರ್ಯಕಾರಿ ಸಮಿತಿ ಸ್ವಾಗತಿಸಿದೆ. ದೇಶದ ಎಲ್ಲಾ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಂದುಗೂಡಿಸುವಲ್ಲಿ ಹಾಗೂ ಜಾತಿ, ಭಾಷೆ, ಪ್ರಾಂತ ಮುಂತಾದ ಸಂಕುಚಿತ ಭಾವನೆಗಳನ್ನು ಹರಡುತ್ತಿರುವ ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಡಲು ಜನಸಾಮಾನ್ಯರಲ್ಲಿ ಅಭಿಪ್ರಾಯ ಮೂಡಿಸಲು ಸಮಿತಿ ಕರೆನೀಡಿದೆ.

2) ನಿಕರಾಗುವ ದೇಶದಲ್ಲಿ, ಜನತೆಯ ಹೋರಾಟ ನಡೆದು ಸರ್ವಾಧಿಕಾರಿ ಸಮೋಜಾ ಸರಕಾರವನ್ನು ಪತನಗೊಳಿಸಲಾಯಿತು. ಇದೇ ವೇಳೆಗೆ ಸಾಂಧಿನಿಸ್ಟ್ ನೇತೃತ್ವದ ರಾಷ್ಟ್ರೀಯ ಸರಕಾರ ಅಧಿಕಾರ ವಹಿಸಿಕೊಂಡಿದೆ.

ನಲವತ್ತು ವರ್ಷಗಳ ಹಿಂದೆ ಅಮೇರಿಕನ್ ಸಾಮ್ರಾಜ್ಯಶಾಹಿಗಳು ತಮ್ಮ ನೌಕಾಪಡೆಯ ಸಹಾಯದಿಂದ ಪದಚ್ಯುತ ಸರ್ವಾಧಿಕಾರಿ ಸಮೋಜಾನ ತಂದೆಯನ್ನು ಜನತೆಯ ಮೇಲೆ ಹೇರಿದರು. ಮಾನವೀಯ ಮೌಲ್ಯಗಳನ್ನು ಹಾಗೂ ನಿಕರಾಗುವ ಜನತೆಯ ಆಶೋತ್ತರಗಳನ್ನು ಬಿಂಬಿಸುತ್ತಿದ್ದ ರಾಷ್ಟ್ರೀಯ ಚಳುವಳಿಯನ್ನು ಅಮೇರಿಕನ್ ಸೈನ್ಯದ ಸಹಾಯದಿಂದ ತುಳಿಯಲಾಯಿತು. ವಿಯಟ್ನಾಂ ಯುದ್ಧದಿಂದ ಮುಖಭಂಗವಾಗಿರುವ ಅಮೇರಿಕ ದೇಶಕ್ಕೆ, ನಿಕರಾಗುವ ಜನತೆ ಮತ್ತೊಂದು ಪಾಠ ಕಲಿಸಿದ್ದಾರೆ. ಆದರೂ, ಅಮೇರಿಕ ತನ್ನ ಹೀನ ಬುಡಮೇಲು ಕೃತ್ಯಗಳನ್ನು ಮುಂದುವರಿಸಿದೆ.

ಭಾರತ ವಿದ್ಯಾರ್ಥಿ ಫೆಡರೇಶನ್ ನಿಕರಾಗುವ ಜನತೆ ತಮ್ಮ ರಕ್ತ, ಪ್ರಾಣ ತ್ಯಾಗಗಳಿಂದ ಪಡೆದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುತ್ತಾರೆ ಹಾಗೂ ಅಮೇರಿಕನ್ ಸಾಮ್ರಾಜ್ಯವಾದಿಗಳ ಎಲ್ಲಾ ಪಿತೂರಿಗಳನ್ನು ವಿಫಲಗೊಳಿಸುತ್ತಾರೆಂದು ಆಶಿಸಿದೆ. ನಿಕರಾಗುವ ಜನತೆ ಮತ್ತು ನೂತನ ಸರಕಾರವನ್ನು ಎಸ್. ಎಫ್. ಐ. ಅಭಿನಂದಿಸಿತು.

3) ಹರ್ಯಾನ ರಾಜ್ಯದ, ಮಹರ್ಷಿ ದಯಾನಂದ ವಿಶ್ವವಿದ್ಯಾಲಯ, ಗೋಹ್‌ಟಕ್‌ನ ಉಪ-ಕುಲಪತಿಗಳು ನಡೆಸುತ್ತಿರುವ ಪಾಳೆಯಗಾರಿ ಅಧಿಕಾರಶಾಹಿತ್ವವನ್ನು ಎಸ್. ಎಫ್. ಐ. ಖಂಡಿಸಿದೆ. ಕೇಂದ್ರಸಮಿತಿ ಸದಸ್ಯ ಹಾಗೂ ಹರ್ಯಾನ ಎಸ್. ಎಫ್. ಐ. ಅಧ್ಯಕ್ಷ ಕಾಂ. ಬಲಬೀರ್‌ಸಿಂಗ್ ದಹಿಯಾ ಹಾಗೂ ವಿಶ್ವವಿದ್ಯಾಲಯದ ನಾಲ್ವರು ಉಪನ್ಯಾಸಕರನ್ನು ಉಪ-ಕುಲಪತಿಗಳು ವಜಾ ಮಾಡಿದ್ದಾರೆ. ರಾಷ್ಟ್ರದ ವಿದ್ಯಾಲಯಗಳಲ್ಲಿ ನಡೆಯುತ್ತಿರುವ ಇಂತಹ ಘಟನೆಗಳನ್ನು ವಿದ್ಯಾರ್ಥಿಗಳು ಒಗ್ಗಟ್ಟಿನಿಂದ ಎದುರಿಸಲು ಕೇಂದ್ರ ಸಮಿತಿ ಕರೆನೀಡಿದೆ. ಉಪ-ಕುಲಪತಿಗಳು ತಮ್ಮ ವರ್ತನೆಯಿಂದ ವಿಶ್ವವಿದ್ಯಾಲಯದ ವಾತಾವರಣವನ್ನು ಕುಲುಷಿತಗೊಳಿಸದಂತೆ ನೋಡಿಕೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸಿದೆ.

N. C. E. R. T.ಯು ಪ್ರಕಟಿಸುತ್ತಿರುವ ಪುಸ್ತಕಗಳ ಬೆಲೆಯನ್ನು ಎರಡುಪಟ್ಟು ಹೆಚ್ಚಿಸಲು ಸರ್ಕಾರ ನಿರ್ಧರಿಸಿರುವುದನ್ನು ಎಸ್. ಎಫ್. ಐ. ವಿರೋಧಿಸಿದೆ. N. C. E. R. T ವಿದ್ಯಾರ್ಥಿಗಳಿಗೆ ಬೇಕಾದ ಅತ್ಯುಪಯುಕ್ತ ಪಠ್ಯಪುಸ್ತಕಗಳನ್ನು ಪ್ರಕಟಿಸುತ್ತಿದ್ದು, ಸರಕಾರದ ಈ ಕ್ರಮದಿಂದಾಗಿ ವಿದ್ಯಾಭ್ಯಾಸವನ್ನು ಕೆಲವರಿಗೆ ಮಾತ್ರ ದೊರೆಯುವ ಸೌಲಭ್ಯವನ್ನಾಗಿ ಸರಕಾರ ಮಾಡಿದೆ. ಸಾಮೂಹಿಕ ಶಿಕ್ಷಣದಂತಹ ಯೋಜನೆಗಳನ್ನು ಜಾರಿ ಮಾಡುವ ಬದಲು, ಸರಕಾರ ಈಗ ತೆಗೆದುಕೊಂಡ ಕ್ರಮ, ಸರಕಾರ ಯಾವ ದಿಸೆಯಲ್ಲಿ ಯೋಚನೆ ಮಾಡುತ್ತಿದೆಯೆಂಬುದನ್ನು ಸೂಚಿಸುತ್ತದೆ.

ಬೆಲೆಹೆಚ್ಚಳವನ್ನು ವಾಪಸ್ಸು ತೆಗೆದುಕೊಳ್ಳದಿದ್ದಲ್ಲಿ ಎಸ್. ಎಫ್. ಐ. ರಾಷ್ಟ್ರದಾದ್ಯಂತ ಚಳುವಳಿ ನಡೆಸಬೇಕಾಗುತ್ತದೆಂದು ಸರಕಾರಕ್ಕೆ ಎಚ್ಚರಿಕೆ ನೀಡಲಾಯಿತು. ಇಂತಹ ವಿದ್ಯಾರ್ಥಿ ವಿರೋಧಿ ಕ್ರಮಗಳನ್ನು ಐಕ್ಯತೆಯಿಂದ ವಿರೋಧಿಸಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಶನ್ ದೇಶದ ವಿದ್ಯಾರ್ಥಿ ವೃಂದಕ್ಕೆ ಕರೆನೀಡಿದೆ.

○

## ಚಂದಾ ವಿವರ

| | |
|---|---|
| ಬಿಡಿಪ್ರತಿ | 40 ಪೈಸೆ |
| 6 ತಿಂಗಳಿಗೆ | 10 ರೂ. |
| ಒಂದು ವರ್ಷಕ್ಕೆ | 20 ರೂ. |

# ಗರಡೊಳ್ಳಿ ಗ್ರಾಮದಲ್ಲಿ ರೈತರ ಸಭೆ

ಉ. ಕ. ಜಿಲ್ಲೆಯ ಹಳಿಯಾಳ ತಾಲ್ಲೂಕಿನ ಗರಡೊಳ್ಳಿ ಗ್ರಾಮದಲ್ಲಿ 21-7-79 ರಂದು ರೈತ-ಕೃಷಿಕೂಲಿಗಾರರ ಸಭೆಯು ಜರುಗಿತು. ಹುತಾತ್ಮ ಮಾರುತಿ ಗಣೇಶ ಪವಾರ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದ ಮೇಲೆ ಸಭೆಯು ಅನೇಕ ನಿರ್ಣಯಗಳನ್ನು ಮಾಡಿತು. ಹುತಾತ್ಮ ಪವಾರ ಇವರ ಕುಟುಂಬಕ್ಕೆ ಪರಿಹಾರವೀಯಬೇಕು, ನಿರಪರಾಧಿ ರೈತರ ಮೇಲೆ ಹೊರಿಸಿರುವ ಸುಳ್ಳು ಆರೋಪಗಳನ್ನು ಹಿಂತೆಗೆದುಕೊಳ್ಳಬೇಕು, ಸಾಗುವಳಿಗೆ ಯೋಗ್ಯವಾದ ಸರಕಾರಿ ಅರಣ್ಯ ಭೂಮಿಯನ್ನು ಭೂರಹಿತರಿಗೆ ಹಂಚಬೇಕು, ರೈತರ ಬೆಳೆಗಳಿಗೆ ಯೋಗ್ಯ ಬೆಲೆ ಕೊಡಬೇಕು, ರೈತರಿಗೆ ಯೋಗ್ಯ ಬೆಲೆಯಲ್ಲಿ ಅವಶ್ಯ ವಸ್ತುಗಳು ದೊರೆಯುವಂತೆ ಪ್ರತಿ ಹಳ್ಳಿಗಳಲ್ಲೂ ಯೋಗ್ಯ ದರದ ಅಂಗಡಿಗಳನ್ನು ತೆರೆಯಬೇಕು, ಹಳ್ಳಿಯ ಬಡ ನಿರುದ್ಯೋಗಿಗಳಿಗೆ ಉದ್ಯೋಗ ಸಿಗುವಂತೆ ಸರಕಾರವು ಕ್ರಮವಹಿಸಬೇಕೆಂಬಿತ್ಯಾದಿ ಬೇಡಿಕೆಗಳ ಮೇಲೆ ನಿರ್ಣಯಗಳನ್ನು ಮಾಡಿ, ಈ ಬೇಡಿಕೆಗಳ ಜಾರಿಗಾಗಿ ಹೋರಾಡಲು ತೀರ್ಮಾನಿಸಲಾಯ್ತು. ಈ ಬೇಡಿಕೆಗಳ ಪಟ್ಟಿಯನ್ನೊಳಗೊಂಡ ಮನವಿಯನ್ನು ತಹಸೀಲ್ದಾರರವರಿಗೆ ಕಳಿಸಲಾಯ್ತು.

○

# ವಿದ್ಯಾರ್ಥಿ ಪರಿಷತ್ತಿನವರಿಂದ ಗೂಂಡಾಗಿರಿ

[ಒಂದನೇ ಪುಟದಿಂದ]

ಮೇಲೆ ಕ್ರಮ ಸಂಖ್ಯೆಗಳನ್ನು ಹಾಕುವಂತೆ ವ್ಯವಸ್ಥೆ ಮಾಡಿಸಿದರು. ಇಷ್ಟೆಲ್ಲಾ ಮಾಡಿಸಿದರೂ ಎಸ್.ಎಫ್.ಐ.ಯವರು ಗೆಲ್ಲುವರೆಂಬ ಭಯದಿಂದ ಆರ್. ಎಸ್. ಎಸ್-ವಿದ್ಯಾರ್ಥಿಪರಿಷತ್ ಪ್ರಚೋದಿತ ಗೂಂಡಾಗಳ ಮೂಲಕ ಹೆದರಿಸಿ ಬೆದರಿಸಿ ಮತಪಡೆಯುವ ಕಾರ್ಯಕ್ರಮವೂ ನಡೆಯಿತು. ಇಷ್ಟೆಲ್ಲಾ ನಡೆಸಿ 78-79ನೇ ಸಾಲಿನಲ್ಲಿ ವಿದ್ಯಾರ್ಥಿ ಸಂಘದ ಅಧಿಕಾರವನ್ನು ಪಡೆದ ವಿದ್ಯಾರ್ಥಿಪರಿಷತ್ ವಿದ್ಯಾರ್ಥಿಗಳ ವಿಶ್ವಾಸವನ್ನು ಪಡೆಯುವುದರಲ್ಲಿ ಯಶಸ್ವಿಯಾಗದಾಯಿತು.

ಈಗ ಮತ್ತೆ 1979-80ನೇ ವರ್ಷದಲ್ಲಿ ಕಾಲೇಜಿನ ವಿದ್ಯಾರ್ಥಿ ಸಂಘದ ಅಧಿಕಾರವನ್ನು ವಿದ್ಯಾರ್ಥಿ ಫೆಡರೇಶನ್ ಮತ್ತೆ ಪಡೆಯುವುದೆಂದು ವಿರೋಧಿಗಳಿಗೆ ಖಚಿತವಾಯಿತು. ಇದನ್ನು ತಪ್ಪಿಸುವುದಕ್ಕಾಗಿ ಆರ್.ಎಸ್.ಎಸ್. ಮತ್ತು ವಿದ್ಯಾರ್ಥಿಪರಿಷತ್‌ನವರಿಂದ ಪ್ರಚೋದಿತರಾಗಿ ಕೆಲವು ಗೂಂಡಾಗಳು ಹಲವು ದಿನಗಳಿಂದ ಎಸ್.ಎಫ್.ಐ. ಕಾರ್ಯಕರ್ತರ ಮೇಲೆ ಧಾಳಿನಡೆಸುವ ಸಂಚು ಹಾಕಿದ್ದರು. ಇದಕ್ಕೆ ಆಡಳಿತವರ್ಗ ಮತ್ತು ಪ್ರಿನ್ಸಿಪಾಲರ ಬೆಂಬಲ ಮತ್ತು ಉತ್ತೇಜನವಿರಲೇ ಬೇಕು.

ತಿಪಟೂರು ಕಲ್ಪತರು ಕಾಲೇಜು ಹಳೆಯ ವಿದ್ಯಾರ್ಥಿ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರೂ, ಕಲ್ಪತರು ಕಾಲೇಜಿನ ವಿದ್ಯಾರ್ಥಿ ಸಂಘದ ಮಾಜಿ ಕಾರ್ಯದರ್ಶಿಗಳು ಮತ್ತು ಎಸ್. ಎಫ್. ಐ. ರಾಜ್ಯ ಸಮಿತಿಯ ಮುಖಂಡರೂ ಆದ ಕಾಂ. ಆರ್.ಎಸ್.ಚೆನ್ನಬಸವಣ್ಣನವರು ತಿಪಟೂರಿನಲ್ಲಿ ಇರದಂತೆ ಮಾಡಬೇಕೆಂಬುದೆ ಇವರ ಯೋಜನೆ ಇದ್ದಂತಿದೆ. 31-7-79 ರಂದು ರಾತ್ರಿ ಸುಮಾರು 10 ಗಂಟೆ ಸಮಯದಲ್ಲಿ ಬಾಪೂಜಿ ವಿದ್ಯಾರ್ಥಿ ನಿಲಯದ ಆವರಣದಲ್ಲಿ, ಹತ್ತಾರು ಜನ ದುಷ್ಕರ್ಮಿಗಳು ಸೇರಿ ಕಾಂ. ಚೆನ್ನಬಸವಣ್ಣನವರಿಗೆ ಸೈಕಲ್ ಚೈನುಗಳಿಂದ ಹೊಡೆದು, ತಲೆಯನ್ನು ಕಲ್ಲುಗಳಿಂದ ಜಜ್ಜಿ ಅಮಾನುಷ ಕೃತ್ಯವನ್ನೆಸಗಿದ್ದಾರೆ. ರಕ್ತದ ಮಡುವಿನಲ್ಲಿ ಮುಳುಗಿದ್ದ ಕಾಂ. ಚೆನ್ನಬಸವಣ್ಣನವರನ್ನು ಜನರಲ್ ಆಸ್ಪತ್ರೆಗೆ ಸೇರಿಸಲಾಗಿದ್ದು, ಇವರ ಪರಿಸ್ಥಿತಿ ಚಿಂತಾಜನಕವಾಗಿದೆ. ಆರ್.ಎಸ್.ಎಸ್-ವಿದ್ಯಾರ್ಥಿಪರಿಷತ್ ಗೂಂಡಾಗಳ ಯೋಜಿತ ಧಾಳಿ ಇದೆಂಬುದಕ್ಕೆ ಸಂಶಯವೇ ಇಲ್ಲ.

ಈ ಅಮಾನುಷ ಕೃತ್ಯ ನಡೆಯುವುದಕ್ಕೆ ಮುಂಚಿತವಾಗಿಯೇ ಎಸ್. ಎಫ್. ಐ. ರಾಜ್ಯಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಂ. ಶಾಂತರೇಣುಕಾರಾಧ್ಯನವರು ತಿಪಟೂರು ಪೋಲೀಸ್ ಠಾಣೆಗೆ ದೂರು ನೀಡಿ, ರಕ್ಷಣೆ ಕೋರಿದ್ದರು. ಪೋಲೀಸ್ ಇಲಾಖೆಯಿಂದ ರಕ್ಷಣೆ ದೊರೆಯದೆ ಇರುವುದು ಮಾತ್ರವೇ ಅಲ್ಲ, ಈ ಅಮಾನುಷ ಕೃತ್ಯವನ್ನೆಸಗಿದ ಗೂಂಡಾಗಳನ್ನು ಇದು ತನಕವೂ ಬಂಧಿಸಿಲ್ಲ. ಪೋಲೀಸರ ಈ ನಿಷ್ಕ್ರಿಯತೆ ಖಂಡನೀಯ. ಪೋಲೀಸರು ಮುಂಜಾಗರೂಕತಾ ಕ್ರಮತೆಗೆದುಕೊಂಡಿದ್ದರೆ, ಈ ಅನಾಹುತವನ್ನು ತಪ್ಪಿಸಬಹುದಿತ್ತು. ಈ ಬಗ್ಗೆ ಪೋಲೀಸ್ ಅಧಿಕಾರಿಗಳಿಗೂ, ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ಅವರಿಗೂ ತಂತಿ ಕಳುಹಿಸಿ ಕೂಡಲೇ ದುಷ್ಕರ್ಮಿಗಳ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಲಾಗಿದೆ.

ಒಂದೆಡೆ ಖಾಸಗಿ ಕಾಲೇಜುಗಳನ್ನು ರಾಷ್ಟ್ರೀಕರಿಸುವೆವು, ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾಭ್ಯಾಸ ಕೊಡುವೆವೆಂದು ಸರಕಾರ ಆಗಿಂದಾಗ್ಗೆ ಹೇಳುತ್ತಿದೆ. ಖಾಸಗಿ ವಿದ್ಯಾಇಲಾಖೆಗಳಲ್ಲಿನ ಅನ್ಯಾಯದ ಮೇಲೆ ಪ್ರಜಾಪ್ರಭುತ್ವ ಹೋರಾಟ ನಡೆಸಿದಾಗ, ಸ್ವಾರ್ಥಹಿತಾಸಕ್ತಿಗಳು ನಡೆಸುವ ಧಾಳಿಗೆ ಸರಕಾರದ ಪರೋಕ್ಷ ಬೆಂಬಲವಿದ್ದಂತಿದೆ. ಉದಾಹರಣೆಗಾಗಿ, ಶಾಂತರೇಣುಕಾರಾಧ್ಯ ಅವರಿಗೆ ಹೈಕೋರ್ಟಿನಲ್ಲಿ ಜಯದೊರೆತರೂ, ಅವರನ್ನು ಕಾಲೇಜಿಗೆ ಸೇರಿಸಿಕೊಳ್ಳುವಂತೆ ಮಾಡುವುದರಲ್ಲಿ ಯುನಿವರ್ಸಿಟಿಯಾಗಲೀ, ಸರಕಾರವಾಗಲೀ ಏನೂ ಮಾಡುತ್ತಿಲ್ಲ. ನ್ಯಾಯಯುತವಾಗಿ ಹೋರಾಡುವ ವಿದ್ಯಾರ್ಥಿಗಳ ಮೇಲೆ ಧಾಳಿ ಬಂದಾಗಲೆಲ್ಲಾ ಪೋಲೀಸರ ನಿಷ್ಕ್ರಿಯತೆ ಕಂಡು ಬಂದಿದೆ.

ಇಂದು ಕಾಂ. ಚೆನ್ನಬಸವಣ್ಣನವರಿಗೆ ಹೊಡೆದಮಾತ್ರಕ್ಕೆ ಎಸ್.ಎಫ್.ಐ.ಯ ಸಿದ್ಧಾಂತವನ್ನು ಮತ್ತು ಸಂಘಟನೆಯನ್ನು ಹತ್ತಿಕ್ಕುವುದು ಸಾಧ್ಯ ಎಂದು ಆರ್.ಎಸ್.ಎಸ್-ವಿದ್ಯಾರ್ಥಿಪರಿಷತ್, ಕಾಲೇಜು ಆಡಳಿತ ವರ್ಗ ಮತ್ತು ಪ್ರಿನ್ಸಿಪಾಲರುಗಳು ತಿಳಿದಿದ್ದರೆ ಅದು ಕೇವಲ ಭ್ರಮೆ. "ಶಾಂತರೇಣುಕಾರಾಧ್ಯ ಅವರ ವಿದ್ಯಾಭ್ಯಾಸಕ್ಕೆ ಕೊನೆಹಾಕಿದ ಶಕ್ತಿಗಳು ಈಗ ಚೆನ್ನಬಸವಣ್ಣನವರ ಜೀವವನ್ನು ಬಲಿ ತೆಗೆದುಕೊಳ್ಳಲು ಮುಂದಾದಂತಿದೆ." ಈ ಅಮಾನುಷ ದುಷ್ಕೃತ್ಯದ ವಿರುದ್ಧ, ಆಡಳಿತವರ್ಗ ಮತ್ತು ಪ್ರಿನ್ಸಿಪಾಲರ ಪ್ರಜಾಪ್ರಭುತ್ವ ವಿರೋಧಿ, ವಿದ್ಯಾರ್ಥಿ ವಿರೋಧಿ ಧೋರಣೆಗಳ ವಿರುದ್ಧ ರಾಜ್ಯದಾದ್ಯಂತ ಪ್ರತಿಭಟನೆಯ ಕೂಗನ್ನು ಎಬ್ಬಿಸಲೇ ಬೇಕು.

ವಿದ್ಯಾರ್ಥಿ ಸಂಘದ ಪದಾಧಿಕಾರಿಗಳ ಸ್ಥಾನಗಳಿಗೆ ನೇರ ಚುನಾವಣೆ ನಡೆಯಬೇಕು, ಸಮಾಜಘಾತುಕ ಶಕ್ತಿಗಳಿಗೆ ಬೆಂಬಲವೀಯುವ ಕಲ್ಪತರು ಕಾಲೇಜಿನ ಪ್ರಿನ್ಸಿಪಾಲರು ರಾಜಿನಾಮೆ ಕೊಡಬೇಕು, ನ್ಯಾಯರೀತ್ಯಾ ಶಾಂತರೇಣುಕಾರಾಧ್ಯ ಅವರನ್ನು ಕಾಲೇಜಿಗೆ ಸೇರಿಸಿಕೊಳ್ಳಬೇಕು, ಕಾಂ. ಚನ್ನಬಸವಣ್ಣ ಮತ್ತು ಇತರ ಸಂಗಾತಿಗಳ ಮೇಲೆ ನಡೆದಿರುವ ಗೂಂಡಾದಾಳಿಯ ಬಗ್ಗೆ ಕೂಡಲೇ ತನಿಖೆಯಾಗಿ, ದುಷ್ಕರ್ಮಿಗಳ ಮೇಲೆ ಕ್ರಮತೆಗೆದುಕೊಳ್ಳಬೇಕು- ಎಂಬ ಬೇಡಿಕೆಗಳ ಮೇಲೆ ರಾಜ್ಯದಾದ್ಯಂತ ಬಲಿಷ್ಟ ಪ್ರತಿಭಟನೆ, ಚಳುವಳಿಯನ್ನು ಬೆಳೆಸಲು ಎಸ್. ಎಫ್. ಐ. ಯು ಮುಂದಾಗಿಯೇ ತೀರುವುದು. ಜಾತೀಯತೆ, ಅಂದಶ್ರದ್ಧೆಗಳನ್ನು ಪ್ರತಿಪಾದಿಸಿ, ಇಂದಿನ ಶೋಷಣಾ ವ್ಯವಸ್ಥೆಯನ್ನು ಪ್ರತಿಪಾದಿಸುವ ದುಷ್ಟಶಕ್ತಿಗಳ ವಿರುದ್ಧ ಹೋರಾಡಲು ರಾಜ್ಯದ ಎಲ್ಲಾ ಪ್ರಗತಿಶೀಲ ಶಕ್ತಿಗಳು ಒಂದಾಗಬೇಕಾಗಿದೆ.

ತಿಪಟೂರಿನಲ್ಲಿ ನಡೆದ ದುಷ್ಕೃತ್ಯದ ವಿರುದ್ಧ ಪ್ರತಿಭಟನೆ ಮತ್ತು ಖಂಡನೆಯ ಕೂಗು ಎಲ್ಲಾ ಕಡೆ ಮೊಳಗಲಿ. ○

## ಕೋಲಾರ ಜಿಲ್ಲಾ ರೈತಸಂಘ ಸಮಿತಿಯ ವಿಸ್ತೃತ ಸಭೆ

ಕೋಲಾರ ಜಿಲ್ಲಾ ರೈತಸಂಘ ಸಮಿತಿಯ ವಿಸ್ತೃತ ಸಭೆಯು ತಾ.29.7.79 ರಂದು ಚಿಂತಾಮಣಿಯಲ್ಲಿ ಸೇರಿತು. ಸಂಘಟನೆ ಮತ್ತು ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿದ ಮೇಲೆ, ಸೆಪ್ಟೆಂಬರ್ 2 ಮತ್ತು 3ರಂದು ಶಿಡ್ಲಘಟ್ಟದಲ್ಲಿ ನಡೆಯಲಿರುವ ಜಿಲ್ಲಾ ಸಮ್ಮೇಳನವನ್ನು ಯಶಸ್ವಿಗೊಳಿಸಲು ತೀರ್ಮಾನಿಸಲಾಯ್ತು. ಜಿಲ್ಲಾ ಸಮ್ಮೇಳನದ ಸಿದ್ಧತೆ ನಡೆಸಲು ಕಾಂ. ಜಿ. ಪಾಪಣ್ಣನವರು ಅಧ್ಯಕ್ಷರಾಗಿಯೂ, ಕಾಂ.ಕೆ.ಎಮ್. ವೆಂಕಟೇಶನವರು ಕಾರ್ಯದರ್ಶಿಯವರಾಗಿಯೂ, ಕಾಂ. ಜಿ. ದೊರೆಸ್ವಾಮಿಯವರು ಖಜಾಂಚಿಯಾಗಿಯೂ ಇರುವ ಮೂವತ್ತನಾಲ್ಕು ಮಂದಿಯ ಸ್ವಾಗತ ಸಮಿತಿಯನ್ನು ರಚಿಸಲಾಯ್ತು. ಸಮ್ಮೇಳನದ ತಯ್ಯಾರಿಗಾಗಿ ಎಲ್ಲಾ ತಾಲ್ಲೂಕುಗಳಲ್ಲೂ ಪ್ರಚಾರ, ಪ್ರಕ್ಷೋಭೆ ನಡೆಸಲೂ, ಸಮ್ಮೇಳನದ ಕೊನೆಯದಿನ ಶಿಡ್ಲಘಟ್ಟದಲ್ಲಿ ರೈತ-ಕಾರ್ಮಿಕರ ಬೃಹತ್ ಮೆರವಣಿಗೆಯನ್ನು ತೆಗೆಯಲೂ ತೀರ್ಮಾನಿಸಲಾಯ್ತು.

ಕರ್ನಾಟಕ ಪ್ರಾಂತ ರೈತಸಂಘದ ಕರೆಯ ಮೇರೆಗೆ ಹಳಿಯಾಳ ಪೋಲೀಸ್ ಗೋಲಿಬಾರಿನಲ್ಲಿ ಮೃತರಾದ ದಿ. ಮಾರುತಿ ಗಣೇಶ ಪವಾರ್ ಅವರ ಕುಟುಂಬಕ್ಕೆ ಸಹಾಯ ನಿಧಿಯನ್ನು ಸಂಗ್ರಹಿಸಲೂ ತೀರ್ಮಾನಿಸಲಾಯ್ತು.

ಬೆಂಗಳೂರಿನಿಂದ ಬಂಗಾರಪೇಟೆಗಿರುವ ನೇರೋಗೇಜ್ ರೈಲ್ವೆ ಲೈನನ್ನು ರದ್ದುಪಡಿಸಿರುವುದರ ವಿರುದ್ಧ ಕ್ರಿಯಾ ಸಮಿತಿಯೊಡನೆ ಸಹಕರಿಸಿ ಹೋರಾಡಲು ಸಮಿತಿಯು ನಿರ್ಣಯಿಸಿತು. ಹಾಗೆಯೇ ನೇರೋಗೇಜನ್ನು ಮೀಟರ್ ಗೇಜನ್ನಾಗಿ ಪರಿವರ್ತಿಸಲೂ ಸರಕಾರವನ್ನು ಒತ್ತಾಯಿಸಲಾಯಿತು.

ಕರ್ನಾಟಕ ಪ್ರಾಂತ ರೈತಸಂಘದ ಅಧ್ಯಕ್ಷ ಕಾಂ. ಎಚ್. ಮುಗವಾಳಪ್ಪ, ಪ್ರಧಾನ ಕಾರ್ಯದರ್ಶಿ ಕಾಂ.ಪಿ.ರಾಮಚಂದ್ರ ರಾವ್, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿ ಪ್ರಧಾನ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್, ರಾಜ್ಯಸಮಿತಿ ಸದಸ್ಯ ಹಾಗೂ ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ.ಎನ್. ಸವರೀದಾಸ್ ಮೊದಲಾದವರು ಸಭೆಯಲ್ಲಿ ಭಾಗವಹಿಸಿದ್ದು ಸೂಕ್ತ ಸಲಹೆಗಳನ್ನು ನೀಡಿದರು. ○

## ಸಂಪಾದಕೀಯ

[ಒಂದನೇ ಪುಟದಿಂದ]

ಗಳಲ್ಲಿನ ಅತ್ತಿಂದಿತ್ತಿನ ಹಾರಾಟಗಳಿಂದ ತಮ್ಮ ಬೆಂಬಲ ಹೆಚ್ಚಾಗುವ ಆಸೆಯನ್ನು ಇಟ್ಟುಕೊಂಡೇ, ಕೇರಳ ಮುಖ್ಯಮಂತ್ರಿಯವರು ತಮ್ಮ ಸರಕಾರ ಸುಭದ್ರವಾಗಿದೆ ಎಂದು ಆಗಾಗ ಸಾರುತ್ತಲೇ ಇರುವರು.

ಇಂದಿನ ಗೊಂದಲಮಯ ಪರಿಸ್ಥಿತಿ ನಿವಾರಿಸಲು ಕೇರಳದಲ್ಲಿ ಮತ್ತೆ ಚುನಾವಣೆ ನಡೆದು ಜನರ ಬೆಂಬಲ ಮತ್ತು ವಿಶ್ವಾಸ ಪಡೆದು ಅಧಿಕಾರಕ್ಕೆ ಬಂದ ಶಕ್ತಿ, ಪಕ್ಷಗಳಿಂದ ಮಾತ್ರ ಸಾಧ್ಯ. ಮಾರ್ಕ್ಸಿಸ್ಟ್ ವಿರೋಧಿ ರಂಗವನ್ನು ತ್ಯಜಿಸಿ, ಮತ್ತೆ ಹೊಸ ಸಂಬಂಧಗಳ ಮೂಲಕ (ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ) ಜನತೆಯ ವಿಶ್ವಾಸಗಳಿಸಲು ಆಳುವ ಸಂಯುಕ್ತರಂಗದಲ್ಲಿನ ಸಿ. ಪಿ. ಐ. ಯು ಮುಂದಾಗುವುದೇ ? ಎಡಪಕ್ಷಗಳ ಐಕ್ಯತೆ ಬಗ್ಗೆ ಬಹಳ ಮಾತನಾಡಿ, ನಿರ್ಣಾಯಕ ಸಮಯ ಬರುವಾಗ ಕೈಕೊಡುವ ಇವರ ಬಗ್ಗೆ ಕಾದು ನೋಡಬೇಕಷ್ಟೆ. ●

## ನೂಲಿನ ಗಿರಣಿ ಕಾರ್ಮಿಕರ ಸಭೆ

ರಾಯಚೂರಿನ ಯವರಸ ಸಹಕಾರಿ ನೂಲಿನ ಗಿರಣಿ ಕಾರ್ಮಿಕರ ಬಹಿರಂಗ ಸಭೆಯು 1-7-79ರಂದು ನಡೆಯಿತು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿ ಸದಸ್ಯ ಮತ್ತು ಸಿ.ಐ.ಟಿ.ಯು. ಮುಂದಾಳು ಕಾಂ. ಗಂಗಾಧರ ನಮೋಶಿಯವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ನೂಲಿನ ಗಿರಣಿ ಕಾರ್ಮಿಕರ ಶೋಚನೀಯ ಸ್ಥಿತಿಯನ್ನು ಹೋಗಲಾಡಿಸಲು, ಬಲಿಷ್ಟ ಸಂಘಟನೆ ಮತ್ತು ಹೋರಾಟ ಮಾಡಲು ಕರೆ ಇತ್ತರು. ಈ ಕಾರ್ಮಿಕರ ಸಂಘಟನೆಗೆ ಮೊದಲು ತಾನೇ ಮಾರ್ಗದರ್ಶನ ನೀಡುತ್ತಲಿದ್ದರೂ, ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ತನ್ನನ್ನು ಬಂಧಿಸಿ ಕೆಲಸಕ್ಕೆ ಇಂದಿರಾ ಸರಕಾರ ಅಡ್ಡಿಮಾಡಿದ್ದನ್ನು ಜ್ಞಾಪಿಸಿದರು ಕಾಂ. ನಮೋಶಿ. ಈಗ ಸಂಘಟನೆಯ ಹಕ್ಕು ಮತ್ತೆ ದೊರೆತಿರುವುದರಿಂದ ಹೋರಾಡಲು ಕರೆಯಿತ್ತರು. ●

## ಪರಿಸರ

ಕಮ್ಯುನಿಸ್ಟರು ನನ್ನ ಸ್ನೇಹಿತರೇನಲ್ಲ.

—ಚರಣ್ ಸಿಂಗ್

ಮುಳುಗಿಹೋಗುತ್ತಿದ್ದ ಸರ್ವಾಧಿಕಾರಿ ಇಂದಿರಾಗಾಂಧಿಯವರು ಚರಣ್‌ಸಿಂಗ್ ಅವರ ಕ್ರಮಗಳಿಂದಾಗಿ ಮತ್ತೆ ಏಳುತ್ತಲಿದ್ದಾರೆ. ಈ ದೃಷ್ಟಿಯಿಂದ ಚರಣ್‌ಸಿಂಗ್ ಸರ್ಕಾರವು ಹಿಂದಿನ ಮೊರಾರ್ಜಿ ಸರ್ಕಾರಕ್ಕಿಂತ ಸ್ವಲ್ಪ ಕೆಟ್ಟದ್ದೇ ಆಗಿದೆ. ಜಮೀನ್ದಾರರ ಮತ್ತು ಬಂಡವಾಳಶಾಹಿಗಳ ಪರವಾದ ಇಂದಿರಾ ಸರ್ಕಾರದ ಆರ್ಥಿಕ ನೀತಿಗಳನ್ನು ಮುಂದುವರಿಸಿಕೊಂಡು ಬಂದ ಮೊರಾರ್ಜಿ ಸರ್ಕಾರದ ನೀತಿಯನ್ನೇ ಚರಣ್‌ಸಿಂಗ್ ಅವರೂ ಪಾಲಿಸುತ್ತಿದ್ದಾರೆ. ಇವರೆಲ್ಲಾ ಒಂದೇ.

"ದಿ ಹಿಂದೂ" ಗೆ ಕೊಟ್ಟ ಸಂದರ್ಶನದಲ್ಲಿ
—ಜ್ಯೋತಿಬಸು

ಒಂದು ದಿವಸದಲ್ಲಿ ಒಬ್ಬ ಸೇದಿ ಹೊಗೆ ಬಿಡುವ ಗಣೇಶ ಬೀಡಿಯ ಒಂದು ಕಟ್ಟಿನ ಬೆಲೆಯೂ 55 ಪೈಸೆ. ಒಂದು ಕುಟುಂಬ ಒಂದು ದಿವಸ ಊಟ ಮಾಡಬಹುದಾದ ಒಂದು ಸೇರು ರಾಗಿಯ ಬೆಲೆಯೂ 55 ಅಥವ 75 ಪೈಸೆ.

—ಕೈಗಾರಿಕೆ ಮತ್ತು ಕೃಷಿ ಉತ್ಪನ್ನಗಳಿಗೆ ಸಿಕ್ಕುತ್ತಿರುವ ಬೆಲೆಯನ್ನು ಕುರಿತು ಓರ್ವ ಸಾಮಾನ್ಯ ರೈತ.

ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಒಗ್ಗಟ್ಟು ಆಗಬೇಕು ಎಂದು ಹಗಲುರಾತ್ರಿ ಬಾಯ್‌ಬಡಿದುಕೊಳ್ಳುತ್ತಲಿದ್ದ ಬಲಕಮ್ಯುನಿಸ್ಟ್ ಪಕ್ಷವು ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ ಬೆಂಬಲಿತ ಚರಣ್ ಸರ್ಕಾರಕ್ಕೆ ಬೆಂಬಲಕೊಟ್ಟಿದೆ. ಇಂದಿರಾಗಾಂಧಿ ಇರುವಲ್ಲಿಗೇ ಹೋಗುವ ಇವರನ್ನು ಯಾರು ನಂಬಲು ಸಾಧ್ಯ ? ಬಲಕಮ್ಯುನಿಸ್ಟರ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಒಗ್ಗಟ್ಟಿನ ಕಳಕಳಿಯ ಬಣ್ಣ ಸಂಪೂರ್ಣ ಬಯಲಾಯಿತು.

—ಜನತಾ ಮಾಧ್ಯಮ

ಹಿಂದಿನ ಜನಸಂಘಕ್ಕೆ ಸೇರಿದ ಸಂಸತ್ ಸದಸ್ಯರು ಆರ್. ಎಸ್. ಎಸ್. ಸಂಬಂಧವನ್ನು ತೊರೆಯುವ ಪ್ರಶ್ನೆಯೇ ಇಲ್ಲ. ಯಾಕೆಂದರೆ ಅವರೆಲ್ಲರೂ ಆರ್. ಎಸ್. ಎಸ್. ನ ಸಕ್ರಿಯ ಕಾರ್ಯಕರ್ತರು.

—ಜಗನ್ನಾಥರಾವ್ ಜೋಶಿ
(ಲೋಕಸಭಾ ಸದಸ್ಯ)

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist). Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
*EDITOR* : M. K. BHAT